ಅಚಲ

ಜನವರಿ 2000

ತಿಂಗಳ ಪತ್ರಿಕೆ

ಒಳಗೇನಿದೆ ?

- ವಿಜ್ಞಾನವನ್ನು ಜನಪ್ರಿಯಗೊಳಿಸಿದ ಗಣಿತಜ್ಞೆ
  - ಮೇರಿ ಸೋಮರ್ ವಿಲ್
- ಮಹಿಳೆಯರಿಗೆ ಮಾರ್ಗದರ್ಶಿ - ಶ್ರೀಮತಿ ಹೆಡ್ವಿಗ್ ಅಸೌರ್
  - ಶಾಂತಾ ನಾಗರಾಜ್
- ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ಪ್ರಗತಿಪರ ತೀರ್ಪು
  - ಹೇಮಲತಾ ಮಹಿಷಿ
- ಸದಾ ಸುದ್ದಿಯಲ್ಲಿರುವ ಕಮಲಾ ಸುರಯ್ಯಾ
  - ನೇಮಿ
- ಪ್ರೀತಿಯ ಅಚಲ, ಪುಸ್ತಕ ಪರಿಚಯ ಇತ್ಯಾದಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 14 ಸಂಚಿಕೆ - 1

ಸಂಪಾದಕ ಮಂಡಲಿ

ಎನ್. ಗಾಯತ್ರಿ,
ನೇಮಿಚಂದ್ರ, ದೇವಿ,
ಬಿ. ಎನ್. ಸುಮಿತ್ರಾಬಾಯಿ
ಶಾಂತಾನಾಗರಾಜ್
ಹೆಚ್. ಎನ್: ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by Dr. N. Gayathri

Published by Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 14 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಹೊಸ ಸಹಸ್ರಮಾನದ ಮೊದಲ ಸಂಚಿಕೆಯಇದು. ನಿಮ್ಮಗೆಲ್ಲಾ ಹೊಸ ಸಹಸ್ರ ಮಾನದ ಶುಭಾಶಯಗಳು. ಹೊಸವರ್ಷ ನಿಮ್ಮನ್ನು ಮತ್ತು ನಮ್ಮನ್ನು ಇನ್ನೂ ಹತ್ತಿರಕ್ಕೆ ತರಲಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಜಬೇಕಿದೆ. ಈ ಘುಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯಧ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಮುಂದೂಡಲ್ಪಟ್ಟ ಮಹಿಳಾ ಮೀಸಲಾತಿ

ಪಾರ್ಲಿಮೆಂಟಿನ ಚಳಿಗಾಲದ ಅಧಿವೇಶನದಲ್ಲಿ ಮತ್ತೊಮ್ಮೆ 'ಮಹಿಳಾ ಮೀಸಲಾತಿ' ವಿಧೇಯಕವನ್ನು ಸಭೆಯಲ್ಲಿ ಮಂಡಿಸಿದ ಶಾಸ್ತ್ರ ಮಾಡಲಾಯಿತು. ಆಳುವ ಮತ್ತು ವಿರೋಧಿ ಪಕ್ಷಗಳ ಬಹು ದೊಡ್ಡ ಸಂಖ್ಯೆಯ ಪ್ರಜಾಪ್ರತಿನಿಧಿಗಳು ಮಹಿಳಾ ಮೀಸಲಾತಿಯ ಪರವಾದ ತಮ್ಮ ನಿಲುವನ್ನೂ, ಒಲವನ್ನೂ ತೋರಿಸುವ ಸಂಭ್ರಮದ ನಾಟಕವೂ ನಡೆಯಿತು. ಆದರೆ ಎಂದಿನಂತೆ ವಿಧೇಯಕದ ಚರ್ಚೆ ಮುಂದಿನ ಅಧಿವೇಶನಕ್ಕೆ ಮುಂದಡಿಯಿಟ್ಟಿದೆ. ಮಹಿಳೆಯರ ಪರವಾಗಿ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿರುವ ಆಳುವ ಪಕ್ಷಕ್ಕೆ ನಿಜವಾಗಿಯೂ ರಾಜಕೀಯ ಸಂಕಲ್ಪವಿದ್ದಿದ್ದಲ್ಲಿ ಈ ಮಸೂದೆಯನ್ನು ಜಾರಿಯಾಗುವಂತೆ ಗೆಲ್ಲಿಸುವುದರಲ್ಲಿ ಯಾವುದೇ ಕಷ್ಟವಿರುತ್ತಿರಲಿಲ್ಲ. ಈ ರಾಜಕೀಯ ದೊಂಬರಾಟದಲ್ಲಿ ಪುರುಷರು ಮಹಿಳೆಯರ ಅಧಿಕಾರೀಕಣ ಪ್ರಕ್ರಿಯೆಗೆ ಒಳಪಡುವುದರ ಬಗ್ಗೆ ಎಂತಹ ವಿರೋಧಿ ನಿಲುವು ಹೊಂದಿದ್ದಾರೆ, ಎಂಬುದು ಸ್ಪಷ್ಟವಾಗಿದೆ. ಈಗ ದುರ್ಬಲವರ್ಗದವರ ಬಗ್ಗೆ ತೋರಿಸುತ್ತಿರುವ ಒಲವು ಸುಮ್ಮನೆ ನೆಪವಾಗಿದೆಯಷ್ಟೆ !

'ಅಧಿಕಾರ'ವೆನ್ನುವ ಪರಿಕಲ್ಪನೆಯೇ ಪುರುಷ ಪ್ರಧಾನ ಸಮಾಜದ ಮೌಲ್ಯವಾಗಿದ್ದು ಅದು ಪುರುಷ ಸಂಸ್ಕೃತಿಯ ಎಲ್ಲಾ ಮೌಲ್ಯಗಳನ್ನೂ ತನ್ನೊಡಲಿನಲ್ಲಿಟ್ಟುಕೊಂಡಿದೆ. ಆಳುವ ಮತ್ತು ಆಳಿಸಿಕೊಳ್ಳುವ ಸಂಬಂಧದ ಪ್ರಕ್ರಿಯೆಯಲ್ಲಿ ಎಂದೂ ಆಳುವ ರೂಢಿಯಿರುವ ಪುರುಷ ಸಮುದಾಯಕ್ಕೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಆಕ್ರಮಿಸುವುದು ಸಂತೋಷದ ವಿಷಯವೇನೂ ಅಲ್ಲ. ಆದ್ದರಿಂದಲೇ ಮೀಸಲಾತಿಯನ್ನು ವಿರೋಧಿಸುತ್ತಿರುವ ಬಹುಪಾಲು ರಾಜಕೀಯ ಪಕ್ಷಗಳು ಮೀಸಲಾತಿಯ ವಿರುದ್ಧದ ಹೋರಾಟವನ್ನು ತಮ್ಮ ಅಸ್ತಿತ್ವಕ್ಕಾಗಿ ನಡೆಸುತ್ತಿರುವ ಹೋರಾಟವೆಂದೇ ಭಾವಿಸಿವೆ.

ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ ದೇಶದ ಅತ್ಯುನ್ನತ ಪದವಿಗಳಲ್ಲಿ ಮಹಿಳೆಯರು ವಿಜೃಂಭಿಸಿರುವುದು ಹೊಸ ಸಂಗತಿಯೇನಲ್ಲ. ಭಾರತ, ಬಾಂಗ್ಲಾದೇಶ, ಪಾಕಿಸ್ತಾನ, ಶ್ರೀಲಂಕಾ—ಈ ದೇಶಗಳಲ್ಲೆಲ್ಲಾ ಪ್ರಧಾನಮಂತ್ರಿ, ಅಧ್ಯಕ್ಷರ ಸ್ಥಾನಗಳನ್ನಲಂಕರಿಸಿದ ಮಹಿಳೆಯರು ತಮಗೆ ಸಿಕ್ಕಿದ ಅವಕಾಶವನ್ನು ಸಮರ್ಥ ರೀತಿಯಲ್ಲಿ ಉಪಯೋಗಿಸಿ ರಾಜಕೀಯ ಸಾಮರ್ಥ್ಯವನ್ನು ತೋರಿಸಿದ್ದಾರೆ. ಆದರೆ ಗಣನೀಯ ಸಂಖ್ಯೆಯಲ್ಲಿ ಮತ್ತು ಕ್ರಿಯಾಶೀಲ ಭಾಗವಹಿಸುವಿಕೆಯಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಇನ್ನೂ ತೋರಿಸಬೇಕಾಗಿದೆ. ಈ ಮಹಿಳಾ ಮೀಸಲಾತಿ ಅಂತಹದೊಂದು ಅವಕಾಶವನ್ನು ಕಲ್ಪಿಸಿಕೊಡಬಲ್ಲುದು, ಎಂಬುದು ಎಲ್ಲ ಮಹಿಳಾ ಹೋರಾಟಗಾರರ ನಂಬಿಕೆಯಾಗಿದೆ.

ವಿಶ್ವದ ಯಾವುದೇ ದೇಶದಲ್ಲಿ ಇರದ ಈ ಮಹಿಳಾ ಮೀಸಲಾತಿ ಭಾರತದಲ್ಲಿ ಮಾತ್ರ ಏಕೆ ಎಂಬ ಪ್ರಶ್ನೆಯನ್ನು ಹಲವಾರು ಮಂದಿ ಪ್ರಸ್ತಾಪಿಸಿರುವುದೂ ಉಂಟು. ಈ ಪ್ರಶ್ನೆಯನ್ನು ಮಹಿಳಾ ಮೀಸಲಾತಿ ಸ್ಥಾಯಿ ಸಮಿತಿಯ ಮುಖ್ಯಸ್ಥೆ ಶ್ರೀಮತಿ ಗೀತಾ ಮುಖರ್ಜಿಯವರನ್ನು ಪತ್ರಕರ್ತರು ಕೇಳಿದಾಗ ಅವರು ನೀಡಿದ ಉತ್ತರ ಗಮನಾರ್ಹವಾದದ್ದು : ''ಮಹಿಳಾ ಮೀಸಲಾತಿಯನ್ನು ಭಾರತವೇ ಏಕೆ ಮೊದಲು ಆರಂಭಿಸಬಾರದು ? ಒಂದು ಒಳ್ಳೆಯ, ಪ್ರಗತಿಪರ ಪರಂಪರೆಯನ್ನು ಆರಂಭಿಸಿದ ಹೆಗ್ಗಳಿಕೆ ಭಾರತಕ್ಕೆ ಏಕೆ ಮೊದಲು ಸಿಕ್ಕಬಾರದು''? ಗೀತಾ ಮುಖರ್ಜಿಯವರ ಈ ತರ್ಕ ನಿಜಕ್ಕೂ ಒಪ್ಪತಕ್ಕದ್ದೆ. ಭಾರತೀಯ ಸಂಸ್ಕೃತಿಯ ಬಗ್ಗೆ ಕೊಚ್ಚಿಕೊಳ್ಳುವ ನಾವು ವಿಶ್ವಕ್ಕೆ ಮಾರ್ಗದರ್ಶಿ ಎಂದು ನಮ್ಮನ್ನು ನಾವೇ ಅಟ್ಟಕ್ಕೇರಿಸಿಕೊಳ್ಳುವುದರಲ್ಲಿ ಹಿಂದೆ ಬೀಳುವುದಿಲ್ಲ. ಸ್ತ್ರೀಯನ್ನು ದೇವತೆಯೆಂದು ಪೂಜಿಸುವ ಬದಲು ಸಹವರ್ತಿನಿಯಂತೆ ರಾಜಕೀಯವಾಗಿ ಸಮಾನಾವಕಾಶ ಕೊಟ್ಟು ಗೌರವಿಸುವುದು ಭಾರತೀಯ ಸಂಸ್ಕೃತಿಗೂ ಭೂಷಣಪ್ರಾಯವಾದದು. ಗ್ರಾಮಪಂಚಾಯತಿ ಚುನಾವಣೆಗಳಲ್ಲಿ ಮಹಿಳೆಯರಿಗೆ ನೀಡಿರುವ ಮೀಸಲಾತಿಯು ಆರೋಗ್ಯಕರ ಪರಿಣಾಮಗಳನ್ನು ನೀಡಿರುವುದನ್ನು ಯಾರೂ ನಿರ್ಲಕ್ಷಿಸಲು ಸಾಧ್ಯವಿಲ್ಲ. ಇಂತಹ ಬೆಳವಣಿಗೆ ಶಾಸನ ಸಭೆಗಳಲ್ಲಿ ಆದಲ್ಲಿ ದೇಶದ ರಾಜಕೀಯವೇ ಬದಲಾದೀತು !

ಇಂದು ದೇಶದಲ್ಲಿ ರಾಜಕೀಯವು ಧನಬಲ, ತೋಳ್ಬಲ, ಹಾಗೂ ಮತ, ಜಾತಿಯ ಆಧಾರಗಳ ಮೇಲೆ ನಿರ್ಧಾರಿತವಾಗುವ ಅಂಶವಾಗಿ ಸಂಕೀರ್ಣ ಸ್ವರೂಪವನ್ನು ಪಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪ್ರವೇಶ ಮಾಡುವುದು ರಾಜಕೀಯ ಸ್ವರೂಪವನ್ನು ಬದಲಿಸಬಲ್ಲುದು; ಹೆಚ್ಚು ಪ್ರಜಾಸತ್ತಾತ್ಮಕ ಸ್ವರೂಪವನ್ನೂ ನೀಡಬಲ್ಲುದು ಮತ್ತು ಮಾನವೀಯ ಅಂಶಗಳನ್ನು ತುಂಬಬಲ್ಲುದು ಎಂಬ ನಂಬಿಕೆ ಮತ್ತು ಆಶಯ ಈ ಮಹಿಳಾ ಮೀಸಲಾತಿಯ ಹೋರಾಟದ ಹಿಂದಿನ ಪ್ರೇರಣೆಗಳಾಗಿವೆ. ಇಂತಹದೊಂದು ಪ್ರಗತಿಪರ ಬದಲಾವಣೆಗೆ ಬೆಂಬಲಿಸಲು ಭಾರತೀಯ ಪುರುಷ ಸಮುದಾಯ ರಾಜಕೀಯ ಸಂಕಲ್ಪದೊಂದಿಗೆ ಎದ್ದು ನಿಲ್ಲಬೇಕು. ಈ ಜನ ಸಮುದಾಯದ ಪ್ರತಿನಿಧಿಗಳಾದ ರಾಜಕೀಯ ಪಕ್ಷಗಳು ಜನಸಮುದಾಯದ ಅಗತ್ಯ ಮತ್ತು ಆಶಯಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುವ ಪ್ರಕ್ರಿಯೆ ಆರಂಭವಾಗಬೇಕು. ಆಗ ನಿಜವಾದ ಅರ್ಥದಲ್ಲಿ ವಿಶ್ವ ಸಮುದಾಯಕ್ಕೆ ಭಾರತವೂ ಒಂದು ಮಾದರಿಯಾಗಬಲ್ಲುದು.

— ಎನ್. ಗಾಯತ್ರಿ

ವಿಜ್ಞಾನವನ್ನು ಜನಪ್ರಿಯಗೊಳಿಸಿದ ಗಣಿತಜ್ಞೆ - ಮೇರಿ ಸೋಮರ್‌ವಿಲ್

- ನೇಮಿಚಂದ್ರ

ಹತ್ತೊಂಬತ್ತನೇ ಶತಮಾನದ ಗಣಿತಜ್ಞರಲ್ಲಿ ಮುಖ್ಯಳಾದ ಮೇರಿ ಸೋಮರವಿಲ್, ಗಣಿತ, ವಿಜ್ಞಾನವನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಬರೆಯಬಹುದು ಎಂದು ತೋರಿಸಿದ್ದು ಮಾತ್ರವಲ್ಲ, ಮಹಿಳೆ ಈ ವಿಷಯಗಳ ಮೇಲೆ ಪ್ರಭುತ್ವ ಸಾಧಿಸಬಲ್ಲಳು ಎಂದು ಕೂಡಾ ತೋರಿಸಿಕೊಟ್ಟಳು. ಡಿಸೆಂಬರ್ 26, 1780ರಂದು ಮೇರಿ ಸ್ಕಾಟ್ಲೆಂಡಿನಲ್ಲಿ ಜನಿಸಿದಳು. ಕೈಗಾರಿಕಾ ಕ್ರಾಂತಿ ಆಗಷ್ಟೇ ಆರಂಭವಾಗಿ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೊಸ ಆಸಕ್ತಿ ಮೂಡಿದ್ದ ಕಾಲ. ಅನೇಕ ರಂಗಗಳಲ್ಲಿ ಹೊಸ ಅನ್ವೇಷಣೆಗಳು ಹೊರಬರುತ್ತಿದ್ದವು. ಮೇರಿ ಸುದೀರ್ಘ ಕಾಲ ಬದುಕಿದ್ದು, ಈ ವಿಜ್ಞಾನ, ಗಣಿತಗಳ ಹೊಸ ಹೊಸ ಅನ್ವೇಷಣೆಗಳನ್ನು ಕುರಿತು ಬರೆದಳು. ಗಣಿತ, ವಿಜ್ಞಾನವನ್ನು ಜನಪ್ರಿಯವಾಗಿಸುವತ್ತ ಆಕೆಯ ಕೊಡುಗೆ ಅತ್ಯಂತ ಮಹತ್ವದ್ದು. ಆ ಕಾಲಕ್ಕೆ ಗಣಿತ, ವಿಜ್ಞಾನವನ್ನು ಜನಪ್ರಿಯಗೊಳಿಸುವ ವಿಚಾರವೇ ಕ್ರಾಂತಿಕಾರಿಯಾಗಿತ್ತು. ಓರ್ವ ಮಹಿಳೆ ಈ ಕಾರ್ಯಕ್ಕಿಳಿಯುವುದು ಯೋಚಿಸಲೂ ಅಸಾಧ್ಯವಿತ್ತು.

ಮೇರಿ ಸೋಮರ್ವಿಲ್ ಯಾವ ಶಾಸ್ತ್ರೀಯ ವಿದ್ಯಾಭ್ಯಾಸವಿಲ್ಲದೆಯೇ, ಯಾರ ಮಾರ್ಗ ದರ್ಶನವಿಲ್ಲದೆ, ಸ್ವಂತ ಕಲಿಕೆ, ಅಧ್ಯಯನದಿಂದ ಅಂತರರಾಷ್ಟ್ರೀಯ ಮಟ್ಟದ ಗಣಿತಜ್ಞಳಾದಳು, ಖಗೋಳ ಶಾಸ್ತ್ರಜ್ಞಳಾದಳು. ಸಹೋದರನ ಶಾಲಾ ಪುಸ್ತಕಗಳಲ್ಲಿ ಬೀಜಗಣಿತವನ್ನು ಓದಿ ಆಕರ್ಷಿತಳಾದ ಈಕೆಗೆ ತಾನು ಬಯಸಿದ್ದನ್ನು ಓದುವುದು ಸುಲಭವಿರಲಿಲ್ಲ. ಮೇರಿ ಓದುವುದನ್ನು ತಾಯಿ ತಂದೆಯರು ಬಲವಾಗಿ ವಿರೋಧಿಸುತ್ತಿದ್ದರು. ಮಹಿಳೆಯರು ಗಣಿತ ಓದುವುದು ಅಸಾಧು, ಅಪಾಯದ್ದು ಎಂಬ ಪೂರ್ವಾಗ್ರಹ ಮೇರಿಯ ವಿದ್ಯಾಭ್ಯಾಸಕ್ಕೆ ತೊಡಕಾಗಿತ್ತು.

ಒಂಭತ್ತು ವರ್ಷದವಳಿದ್ದಾಗ ಮೇರಿಯನ್ನು ಒಂದು 'ವಸತಿ ಶಾಲೆಗೆ' ಕಳುಹಿಸಲಾಯಿತು. ಆದರೆ ಮೇರಿಗೆ ಶಾಲೆ ಕೊಂಚವೂ ಹಿಡಿಸಲಿಲ್ಲ. ಶಾಲೆಯಲ್ಲಿ ಹುಡುಗಿಯರು ಹಾಕಿಕೊಳ್ಳಬೇಕಾದ ಉಡುಪು ತೀರಾ ಅಸಂಬದ್ಧವಿದ್ದು ಮೇರಿಯ ಕಣ್ಣಲ್ಲಿ ಸದಾ ನೀರು. ಆ ಉಡುಪು, ಸೊಂಟದ ಮೇಲೆ ಆಕೆಯನ್ನು ಸೆಟೆದು ನೆಟ್ಟಗೆ ನಿಲ್ಲಿಸುವಂತೆ ಸುತ್ತಿಟ್ಟು, ಮುಂದುಗಡೆ ಸ್ಟೀಲಿನ ಎದೆಪಟ್ಟಿ ಹಾಕಿ ಬಿಗಿದಿತ್ತು. ಭುಜಗಳನ್ನು ಹಿಡಿದು ಹಿಂದಕ್ಕೆಳೆದಿಟ್ಟ ಬ್ಯಾಂಡುಗಳಿದ್ದವು. ಅರ್ಧ ಚಂದ್ರಾಕಾರವಿದ್ದ ಮತ್ತೊಂದು ಸ್ಟೀಲಿನ ಸಲಾಕಿ, ಆಕೆಯ ಗಲ್ಲದಡಿ ಹಿಡಿದಿಟ್ಟು, ಸ್ಟೀಲಿನ ಎದೆಪಟ್ಟಿಯ ಕೊಂಡಿಯೊಡನೆ ಭದ್ರಪಟ್ಟಿತ್ತು. ಇಂಥಾ ಕಟ್ಟಿಟ್ಟ ಸ್ಥಿತಿಯಲ್ಲಿ ಆ ಹುಡುಗಿಯರು ಪಾಠ ಕಲಿಯಬೇಕಿತ್ತು. ಅಲ್ಲಿಯ ಶಿಕ್ಷಣವೂ ಅಷ್ಟೇ ಅಸಂಬದ್ಧವಿತ್ತು. ದಿನವೂ ಜಾನ್ಸನ್ ನಿಘಂಟಿನ ಪುಟವೊಂದನ್ನು ಬಾಯಿಪಾಠ ಮಾಡಲು ಹೇಳುತ್ತಿದ್ದರು.

ಅಲ್ಲಿಂದ ಒಂದು ವರ್ಷಕ್ಕೆ ಮೇರಿಯ ವಿದ್ಯಾಭ್ಯಾಸ ನಿಂತಿತು. ಮನೆಯಲ್ಲೇ ಸಿಕ್ಕ ಸಿಕ್ಕ ಪುಸ್ತಕಗಳನ್ನು ಓದತೊಡಗಿದಳು. ಸೋದರತ್ತೆ ಜಾನೆಟ್‌ಗೆ ಹೆಣ್ಣು ಮಕ್ಕಳು ಪುಸ್ತಕ ಓದುವುದು ಸುತರಾಂ ಇಷ್ಟವಿರಲಿಲ್ಲ. 'ಮೇರಿಗೆ ಓದೋಕೆ ಬಿಡ್ತೀಯಲ್ಲ, ಮೇರಿ ಕಸೂತಿ, ಹೊಲಿಗೆ ಹಾಕಿದ್ದು ಒಮ್ಮೆಯೂ ಕಂಡಿಲ್ಲ' ಎಂದು ಆಕೆ ಸದಾ ಅಮ್ಮನೊಡನೆ ದೂರಿ ಆಕ್ಷೇಪಿಸಿದಾಗ, ಮೇರಿಯನ್ನು ಹಳ್ಳಿಯ ಶಾಲೆಗೆ ಕಳುಹಿಸಿದರು. ಇಲ್ಲಿ ಹೆಂಗಸರು ಕಲಿಯಲೇ ಬೇಕಾದ ಸೂಜಿ ದಾರದ ಹೊಲಿಗೆ ಕೆಲಸ ಕಲಿಸುತ್ತಿದ್ದರು.

ಹದಿಮೂರನೇ ವರ್ಷಕ್ಕೆ ಮೇರಿಗೆ 'ಬೀಜ ಗಣಿತ'ದ ಪರಿಚಯವಾಯಿತು. ಒಂದು ಮಹಿಳಾ ಪತ್ರಿಕೆ, ಪ್ರತಿ ಸಂಚಿಕೆಯಲ್ಲಿ ಅನೇಕ ಗಣಿತದ ಒಡಪುಗಳನ್ನು ಕೊಟ್ಟಿರುತ್ತಿದ್ದರು. ಅವುಗಳ ಮೂಲಕ ಮೇರಿಗೆ ಬರೀ ಅಂಕಿಗಳಿರುವ ಗಣಿತವಲ್ಲ, ಅಕ್ಷರಗಳಿಂದ ಗಣಿತದ ಅರಿವಾಯಿತು. 'ಎಕ್ಸ್' 'ವೈ' ಗಳಿರುವ ಸಾಲುಗಳನ್ನು ನೋಡಿ 'ಇದೇನು?' ಎಂದು ವಿಚಾರಿಸಿದಾಗ ಅದು 'ಬೀಜಗಣಿತ' ಎಂಬ ಉತ್ತರ ಬಂದಿತ್ತು. ಆದರೆ ಆ ವಿಷಯದ ಬಗ್ಗೆ ಹೆಚ್ಚು ತಿಳಿಸುವವರಿರಲಿಲ್ಲ. ಮುಂದೊಮ್ಮೆ ಆಕೆಯ ಕಡೆಯ ತಮ್ಮನಿಗೆ ಮನೆಪಾಠ ಹೇಳಿಕೊಡಲು ಬರುತ್ತಿದ್ದ ಪ್ರಾಧ್ಯಾಪಕ, ಮೇರಿಗೆ ಬೀಜಗಣಿತದ ಬಗ್ಗೆ ತಿಳಿಸಿದ. ಮೇರಿ ಆತನಲ್ಲಿ ತನ್ನ ಆಸಕ್ತಿಯನ್ನು ತೋಡಿಕೊಂಡು ಎಡಿನ್ಬರ್ಗಗೆ ಹೋದಾಗ ಈ ಬೀಜಗಣಿತ ಮತ್ತು ಜಾಮಿತಿಗಳ ಪ್ರಾಥಮಿಕ ಪುಸ್ತಕಗಳನ್ನು ಕೊಂಡು ತರಲು ಬೇಡಿದಳು. ಕೊನೆಗೂ ಆ ಪುಸ್ತಕಗಳು ಕೈಗೆ ಸಿಕ್ಕಾಗ ಮೇರಿ ಅವುಗಳಲ್ಲಿ ಪೂರ್ಣ ಮುಳುಗಿದಳು. ತಟ್ಟನೆ ತಾ ಹಿಂದೆಂದೋ ಬಿಟ್ಟು ಮರೆತಿದ್ದ ಗಣಿತವನ್ನು ಒರೆಗಚ್ಚಿ ಓದಿದಳು. ಆಕೆಯ ಗಣಿತದ ಹುಚ್ಚು, ಉತ್ಕಟ ಆಸಕ್ತಿ ಮತ್ತು ಅಧ್ಯಯನ ತಂದೆ-ತಾಯಿಯರಿಗೆ ಗಾಭರಿ ಹುಟ್ಟಿಸಿತು.

ಮೇರಿಯ ದಿನಗಳು ಇತರ ಹೆಂಗಸರಂತೆ ಚಿತ್ರ ಬಿಡಿಸುತ್ತಾ, ಪಿಯಾನೋ ನುಡಿಸುತ್ತಾ, ಕಸೂತಿ ಹಾಕುತ್ತಾ ಕಳೆಯುತ್ತಿತ್ತು. ಆದರೆ ರಾತ್ರಿಗಳು ಯೂಡ್ಲಿಕನ ಗಣಿತಕ್ಕೆ ಮೀಸಲಾದವು. ಮನೆಯಲ್ಲಿ ಮೋಂಬತ್ತಿಗಳು ಅತಿ ಶೀಘ್ರವಾಗಿ ಮುಗಿಯತೊಡಗಿದಾಗ ಆಕೆಯ ತಾಯಿ-ತಂದೆ ಮೊಂಬತ್ತಿ ಕಿತ್ತಿಟ್ಟುಕೊಂಡರು. ಸ್ತ್ರೀಯರ ಆರೋಗ್ಯಕ್ಕೆ ಗಣಿತ ಒಳ್ಳೆಯದಲ್ಲವೆಂಬ ವಾದ ಅವರದಾಗಿತ್ತು. ಇಂಥಾ ಕೌಟುಂಬಿಕ ವಿರೋಧದ ನಡುವೆಯೂ ಧೃತಿಗೆಡದ ಮೇರಿ, ಇಡೀ ಗಣಿತದ ಸಮಸ್ಯೆಯನ್ನು ನೆನಪಿನಲ್ಲಿಟ್ಟುಕೊಂಡು, ರಾತ್ರಿಯ ಕತ್ತಲಲ್ಲಿ ಮನಸ್ಸಿನಲ್ಲೇ ಸಮಸ್ಯೆಯನ್ನು ಕುರಿತು ಕೆಲಸ ಮಾಡಿ ಉತ್ತರಗಳನ್ನು ಕಂಡುಕೊಳ್ಳುತ್ತಿದ್ದಳು.

1804ರಲ್ಲಿ ಮೇರಿ, ತನ್ನ ಸಂಬಂಧಿಯಾದ ರಷಿಯಾದ ನೌಕಾಪಡೆಯ ಕ್ಯಾಪ್ಟನ್ ಸ್ಯಾಮುಯೆಲ್ ಗ್ರೀಗನೊಡನೆ ವಿವಾಹವಾದಳು. ಆತನಿಗೆ ವಿಜ್ಞಾನದಲ್ಲಿ ಆಸಕ್ತಿ ಇರಲಿಲ್ಲ. ಮಹಿಳೆಯರ ಬುದ್ಧಿಮತ್ತೆಯ ಬಗೆಗೆ ಕೀಳುಭಾವವಿತ್ತು. ಮೇರಿಗೆ ಮೇಧಾಪಿತನವನ್ನು ಹೀನಾಯಿಸುತ್ತಿದ್ದ ಪತಿಯೊಡನೆ ದಾಂಪತ್ಯ ಸುಖವಿರಲಿಲ್ಲ. ಪತಿ-ಪತ್ನಿಯರಿಬ್ಬರೂ ಲಂಡನ್ನಿನಲ್ಲಿ ನೆಲೆಸಿದ್ದರು. ಸದ್ಯಕ್ಕೆ ಮೇರಿಯ ಅಧ್ಯಯನ ನಿಂತಿತು. ಆದರೆ ಮೂರು ವರ್ಷಗಳಲ್ಲಿ ತೀರಿಕೊಂಡ ಗಂಡ, ಇಬ್ಬರು ಎಳೆಯ ಗಂಡು ಮಕ್ಕಳನ್ನು ಬಿಟ್ಟು ಹೋಗಿದ್ದ. ಪತಿಯ ಮರಣ ಮೇರಿಗೆ ಮತ್ತೆ ತನ್ನ ಆಸಕ್ತಿಯ ಅಧ್ಯಯನಕ್ಕೆ ಹಿಂತಿರುಗಲು ಅವಕಾಶ ಒದಗಿಸಿಕೊಟ್ಟಿತು. 1807ರಲ್ಲಿ ಪತಿ ಮರಣಿಸಿದಾಗ, ಮೇರಿ ಮಗನೊಡನೆ ಸ್ಕಾಟ್ಲಂಡಿಗೆ ಹಿಂತಿರುಗಿ ತನ್ನ ವಿದ್ಯಾಭ್ಯಾಸವನ್ನು ಗಂಭೀರವಾಗಿ ಆರಂಭಿಸಿದಳು. 27 ವರ್ಷದ ವಿಧವೆ ಮೇರಿ ಈಗ ಆರ್ಥಿಕವಾಗಿ ಸ್ವತಂತ್ರಳಿದ್ದಳು. ಜೀವನದಲ್ಲಿ ಮೊಟ್ಟ ಮೊದಲಿಗೆ ಮೇರಿ, ತಾಯಿ-ತಂದೆ-ಗಂಡನ ನಿರ್ಬಂಧನಗಳಿಂದ ಬಿಡುಗಡೆ ಪಡೆದು ತನ್ನ ಬದುಕು-ಸಮಯವನ್ನು ತನ್ನಿಚ್ಛೆಯಂತೆ ಕಳೆಯುವ ಅಧಿಕಾರ, ಅವಕಾಶ ಪಡೆದಿದ್ದಳು. ಪತ್ರಿಕೆಯೊಂದರಲ್ಲಿ ಕಂಡ ಗಣಿತದ ಸಮೀಕರಣಗಳ ಸಮಸ್ಯೆಗೆ, ಸರಿಯಾದ ಉತ್ತರ ಕೊಟ್ಟ ಮೇರಿ ಬಹುಮಾನವೊಂದನ್ನು ಗಳಿಸಿದಳು. ಬಹುಮಾನದ ಹಣವನ್ನೆಲ್ಲ ಗಣಿತದ ಪುಸ್ತಕಗಳನ್ನು ಕೊಳ್ಳಲು ಬಳಸಿದಳು.

1812ರಲ್ಲಿ ಮೇರಿ ತನ್ನ ಸಂಬಂಧಿ ಡಾ. ವಿಲಿಯಮ್ ಸೋಮರ್ವಿಲ್‌ನನ್ನು ವಿವಾಹವಾದಳು. ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಹುಟ್ಟಿದರು. ವಿಲಿಯಂ ಭೂಸೇನೆಯಲ್ಲಿ ವೈದ್ಯನಾಗಿದ್ದ ಮೇಧಾವಿ ವ್ಯಕ್ತಿ. ಪತಿ ತಾನು ಸದಸ್ಯನಾಗಿದ್ದ 'ರಾಯಲ್ ಸೊಸೈಟಿ' ಯಿಂದ ವಿಜ್ಞಾನದ ಪುಸ್ತಕಗಳನ್ನು, ಪತ್ರಿಕೆಗಳನ್ನು ಪತ್ನಿಗಾಗಿ ಕಡ ತರುತ್ತಿದ್ದ. 1816ರಲ್ಲಿ ಇವರು ಲಂಡನ್ನಿಗೆ ಬಂದು ನೆಲೆಸಿದರು. ಇಲ್ಲಿ ಕಲೆ, ಸಾಹಿತ್ಯ, ವೈಜ್ಞಾನಿಕ ರಂಗಗಳ ಮುಂಚೂಣಿಯಲ್ಲಿದ್ದ ಜನರ ಆರಂಭವಾಯಿತು. ಮೇರಿ ಸೋಮರ್‌ವಿಲ್ ಹತ್ತೊಂಭತ್ತನೇ ಶತಮಾನದ ಪ್ರಮುಖ ಗಣಿತಜ್ಞಳಾಗಿ ಗುರುತಿಸಲ್ಪಟ್ಟಳು. ಈಕೆ 'ದಿ ಮ್ಯಾಗ್ನೆಟಿಕ್ ಪ್ರಾಪರ್ಟೀಸ್ ಆಫ್ ದಿ ವೈಲೆಟ್ ರೇಸ್ ಆಫ್ ದಿ ಸೋಲಾರ್ ಸ್ಪೆಕ್ಟ್ರಮ್' ಎಂಬ ತನ್ನ ವೈಜ್ಞಾನಿಕ ಪ್ರಬಂಧವನ್ನು 1826ರಲ್ಲಿ ರಾಯಲ್ ಸೊಸೈಟಿಗಾಗಿ ತಯಾರಿಸಿದಳು. ಆದರೆ ರಾಯಲ್ ಸೊಸೈಟಿಯಲ್ಲಿ ಮಹಿಳೆಯರಿಗೆ ಪ್ರವೇಶವಿಲ್ಲದ ಕಾರಣ, ಆಕೆಯ ಪತಿ ಆತನ ಪತ್ನಿಗೆ ಪೂರ್ಣ ಬೆಂಬಲ ಕೊಟ್ಟದ್ದಲ್ಲದೆ ಆಕೆಯ ಯಶಸ್ಸು, ಕೀರ್ತಿಯನ್ನು ತುಂಬಾ ಸಂತಸದಿಂದ ಸ್ವೀಕರಿಸಿದ್ದ. ಪತ್ನಿಗೆ ಬೇಕಾದ ಪುಸ್ತಕ ಹುಡುಕಿ ಕೊಡುವುದರಲ್ಲಿ, ಆಕೆ ಹಸ್ತಪ್ರತಿಗಳನ್ನು ಪದೇ ಪದೇ ಪ್ರತಿ ಮಾಡಿ ಆಕೆಗೆ ಸಮಯ ಉಳಿಸುವುದರಲ್ಲಿ ಅತ್ಯಂತ ಖುಷಿ ಕಾಣುತ್ತಿದ್ದ. ಆಕೆಗಾಗಿ ಯಾವುದೇ ಶ್ರಮದ ಕೆಲಸ ಹೆಚ್ಚಿನದೆನಿಸಿರಲಿಲ್ಲ. ಅದು ಆತನ ಪ್ರೀತಿಯ ಅಭಿವ್ಯಕ್ತಿಯಾಗಿತ್ತು.

ಆದರೆ ಎಲ್ಲರೂ ಮೇರಿಯ ಓದು-ಬರಹ-ಕೀರ್ತಿಯನ್ನು ಅಭಿಮಾನದಿಂದ ಸ್ವೀಕರಿಸಿದವರಲ್ಲ. ವಿಲಿಯಂ ಜೊತೆ ವಿವಾಹ ನಿಶ್ಚಯವಾದಾಗ, ವಿಲಿಯಂನ ಸೋದರಿಯೊಬ್ಬಳು 'ನಿನ್ನ ಹುಚ್ಚುತನದ ಓದು ಬರಹದ ಬದುಕನ್ನು ಬಿಟ್ಟು, ನನ್ನ ಸೋದರನಿಗೆ ಒಳ್ಳೆ ಹೆಂಡತಿ ಆಗುತ್ತೀಯ ಎಂದು ಭಾವಿಸುತ್ತೇನೆ' ಎಂದು ಬರೆದಿದ್ದಳು. ಆದರೆ ಮೇರಿ ಮತ್ತು ವಿಲಿಯಂ ಇಬ್ಬರಿಗೂ ತಮ್ಮ ವೈಯಕ್ತಿಕ ಬದುಕಿನಲ್ಲಿ ಇತರರ ಈ ರೀತಿ ಒಳಪ್ರವೇಶ, ಸಿಟ್ಟು ತರಿಸಿತು. ತಮ್ಮ ಅಸಮಾಧಾನವನ್ನು ಸ್ಪಷ್ಟವಾಗಿ ವ್ಯಕ್ತ ಪಡಿಸಿದ ಮೇಲೆ ಮುಂದೆ ಯಾರೂ ಅವರೆದುರು ಅವರ ಬದುಕಿನ ರೀತಿಯ ಬಗ್ಗೆ ಟೀಕಿಸಲು ಹೋಗಲಿಲ್ಲ.

1827, ಮೇರಿಗೆ 47 ವರ್ಷ, ಲಾರ್ಡ್ ಬ್ರೂಹಾಮ್ ಆಕೆಯನ್ನು ಉದ್ದೇಶಿಸಿ ಬರೆದ ಪತ್ರವೊಂದು ಆಕೆಯ ಪತಿಯ ಹೆಸರಿಗೆ ಬಂದಿತ್ತು. ಆಕೆ ಪ್ರಸಿದ್ಧಳಾದ ಮೇಲೂ ಆಕೆಯ ಬಹಳಷ್ಟು ಪತ್ರಗಳು ಪತಿಯ ಹೆಸರಿಗೇ ಬರುತ್ತಿದ್ದವು. ಆ ಪತ್ರದಲ್ಲಿ ಲಾರ್ಡ್ ಬ್ರೂಹಮ್ ಮೇರಿಯನ್ನು ಲಾಪ್ಲಾಸನ 'ಸೆಲೆಸ್ಟಿಯಲ್ ಮೆಕಾನಿಕ್ಸ್' ಕುರಿತು ಜನಪ್ರಿಯ ಪುಸ್ತಕವೊಂದನ್ನು ಬರೆಯಲು ಕೇಳಿಕೊಂಡಿದ್ದ. ಈ ಮೂಲಕ ಲಾಪ್ಲಾಸನ ಪುಸ್ತಕ ಹೆಚ್ಚಿನ ಜನಕ್ಕೆ ತಲುಪುವುದೆಂಬುದು ಆತನ ಉದ್ದೇಶವಾಗಿತ್ತು. ಈ ಕೆಲಸಕ್ಕೆ ವಿಜ್ಞಾನವನ್ನು ಆಳವಾಗಿ ಅರ್ಥ ಮಾಡಿಕೊಂಡ ವಿಜ್ಞಾನ ಲೇಖಕರ ಅಗತ್ಯವಿತ್ತು. ಇಂಥಾ ಅವಕಾಶದಿಂದ ಮೇರಿ ಹಿಗ್ಗಿದರೂ, ತನ್ನ ಸಾಮರ್ಥ್ಯದ ಬಗ್ಗೆ

ತುಂಬಾ ಅಳುಕಿದ್ದ ಕಾರಣ ಗುಪ್ತವಾಗಿ ಮೇರಿ ಈ ಕೆಲಸವನ್ನು ಒಪ್ಪಿಕೊಂಡಳು. ಒಂದು ಪಕ್ಷ ತಾನು ಈ ಯತ್ನದಲ್ಲಿ ವಿಫಲಳಾದರೆ ಕೇವಲ ತನ್ನವರಿಗೆ ಮಾತ್ರ ಅದು ಗೊತ್ತಾಗುವುದು ಎಂಬ ಧೈರ್ಯ. 'ಮಹಿಳೆ ನಮ್ಮ ಸಮಾಜದಲ್ಲಿ ಎಂಥಾ ಒತ್ತಡಗಳ ನಡುವೆ ಕೆಲಸ ಮಾಡಬೇಕಾಗುತ್ತದೆ' ಎಂಬುದನ್ನು ತನ್ನ ಆತ್ಮಚರಿತ್ರೆಯಲ್ಲಿ ಮೇರಿ ವಿವರಿಸಿದ್ದಾಳೆ. ಬೆಳಗ್ಗೆ ಬೇಗ ಎದ್ದು, ಮಕ್ಕಳು ಕುಟುಂಬದ ಅಗತ್ಯಗಳನ್ನು ಪೂರೈಸಿ ಬರಹಕ್ಕೆ ಸಮಯ ಉಳಿಸಿಕೊಳ್ಳುತ್ತಿದ್ದಳು. ಹಾಗಿದ್ದೂ ಅವಳ ಬರಹಕ್ಕೆ ನೂರೆಂಟು ಅಡಚಣೆಗಳು ಇದ್ದೇ ಇರುತ್ತಿದ್ದವು. 'ಗಂಡಸು ಅಂಥಾ ಯಾವ ಅಡೆತಡೆಗಳಿಲ್ಲದೆ ತನ್ನ ಹಕ್ಕಿನದೆಂಬಂತೆ ಸಮಯ ಪಡೆಯಬಲ್ಲ, ಮಹಿಳೆಗೆ ಅಂಥಾ ಅವಕಾಶಗಳಿಲ್ಲ. ಮನೆಗೆ ಬರುವ ನೆಂಟರು ಇಷ್ಟರು ಸ್ನೇಹಿತರನ್ನು ಬೇಟಿಯಾಗದೆ ಇರಲು, ಆತಿಥ್ಯ ನೀಡಿ ಆದರಿಸದೆ ಇರಲು ಸಾಧ್ಯವಿಲ್ಲ. ಯಾವುದೋ ಕ್ಲಿಷ್ಟ ಸಮಸ್ಯೆಯ ನಡುವೆ ಮುಳುಗಿದ್ದಾಗ ಸಮ್ಮನೆ ಸಮಯ ಕಳೆಯಲು ಬರುವ ಜನರ ಕುರಿತು ಅಸಮಾಧಾನವಾದರೂ, ಏನೂ ಮಾಡುವಂತಿಲ್ಲ' ಎಂದು ಹೇಳಿಕೊಂಡ ಮೇರಿ ಸೋಮರವಿಲ್, ಈ ಎಲ್ಲಾ ಅಡೆತಡೆಗಳ ನಡುವೆಯೂ ತನ್ನ ಕೆಲಸವನ್ನು ಮುಂದುವರೆಸಿದಳು. ಹೊರಗಿನ ಯಾರಿಗೂ ತಿಳಿಯದಂತೆ ಬರೆದಳು. ಬೆಟ್ಟಿ ಮಾಡಲು ಬಾಗಿಲಿಗೆ ಯಾರಾದರೂ ಬಂದರು ಎಂದೊಡನೆ ತನ್ನ ಹಾಳೆಗಳನ್ನು ಅವಿತಿಡುವಳು. ಕಡೆಗೂ ಒಪ್ಪಿಕೊಂಡ ಕೆಲಸ ಮುಗಿಯಿತು. ಫ್ರೆಂಚ್ ಭಾಷೆಯಲ್ಲಿದ್ದ ಪ್ರಸಿದ್ಧ ವೈಜ್ಞಾನಿಕ ಕೃತಿಯನ್ನು ಇಂಗ್ಲೀಷಿಗೆ, ಸುಲಲಿತವಾಗಿ ಅರ್ಥವಾಗುವ ಭಾಷೆಯಲ್ಲಿ, ರೇಖಾ ಚಿತ್ರಗಳನ್ನು ಅಳವಡಿಸಿ ಅನುವಾದಿಸಿದಳು. 1831ರಲ್ಲಿ 'ದಿ ಮೆಕಾನಿಕ್ಸ್ ಆಫ್ ಹೆವನ್ಸ್' ಪುಸ್ತಕ ಸಿದ್ಧವಾಗಿ, ಅತ್ಯಂತ ಜನಪ್ರಿಯವಾಗಿ ಯಶಸ್ಸು ಕಂಡಿತು. ಈ ಪುಸ್ತಕದಲ್ಲಿ ಆಕೆ ತನ್ನ ಸ್ವಂತದ ವೈಜ್ಞಾನಿಕ ಟಿಪ್ಪಣಿಗಳನ್ನು ಸೇರಿಸಿದ್ದಳು. ಮುಂದಿನ ವರ್ಷ ವರ್ಷಗಳು, ಈ ಪುಸ್ತಕ ಪ್ರೌಢ ಗಣಿತ ಮತ್ತು ಖಗೋಳಶಾಸ್ತ್ರದ ಜನಪ್ರಿಯ ಪಠ್ಯವಾಗಿ ಉಳಿಯಿತು.

1834ರಲ್ಲಿ ಹೊರಬಂದ ಮೇರಿಯ ನಂತರದ ಪುಸ್ತಕ 'ಆನ್ ದಿ ಕನೆಕ್ಷನ್ ಆಫ್ ದಿ ಫಿಸಿಕಲ್ ಸೈನ್ಸ್' ಕೂಡಾ ಅಖಂಡ ಜನಪ್ರಿಯತೆಯನ್ನು ಪಡೆದುಕೊಂಡುದಲ್ಲದೆ, ಹತ್ತು ಬಾರಿ ಮರುಮುದ್ರಣಗೊಂಡು, ಇಟಲಿ, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಿಗೆ ಅನುವಾದಿತವಾಯಿತು. ಈ ಪುಸ್ತಕದಲ್ಲಿ ಈಕೆ 'ಯುರೇನಸ್ಸಿನ ಅಡ್ಡಾದಿಡ್ಡಿ ಚಲನೆಯನ್ನು ನೋಡಿದರೆ, ಇಲ್ಲಿಯವರೆಗೂ ಕಂಡಿರದ ಮತ್ತೊಂದು ಗ್ರಹದ ಅಸ್ತಿತ್ವವನ್ನು ಅದು ಹೇಳುತ್ತಿರಬಹುದು' ಎಂದು ಬರೆದಿದ್ದಳು. ಮುಂದೆ ಜಾನ್ ಕೌಚ್ ಆಡಮ್ಸ್, ಮೇರಿ ಊಹಿಸಿದ್ದ ಗ್ರಹ 'ನೆಪ್ಚೂನ್' ಎಂದು ಗುರುತಿಸಿದ. ಅಲ್ಲಿಂದ ಮುಂದೆ ಮೇರಿಗೆ ಗೌರವ ಪ್ರಶಸ್ತಿಗಳು ಒಂದೊಂದಾಗಿ ಹಾದು ಬಂದವು. 1835 ಮೇರಿ ಮತ್ತು ಕ್ಯಾರೋಲಿನ್ ಹರ್ಷಲರನ್ನು, ರಾಯಲ್ ಅಸ್ಟ್ರೊನೋಮಿಕಲ್ ಸೊಸೈಟಿಯ ಮೊಟ್ಟ ಮೊದಲ ಮಹಿಳಾ ಸದಸ್ಯರಾಗಿ ಚುನಾಯಿಸಲಾಯಿತು. ಮೇರಿ ಸೋಮರ್‌ವಿಲ್‌ಯ ಮೂರ್ತಿಯನ್ನು ರಾಯಲ್ ಸೊಸೈಟಿಯ ಬೃಹತ್ ಆವರಣದಲ್ಲಿ ನಿಲ್ಲಿಸಲಾಯತು.. ಆದರೆ ವಿಷಾದವೆಂದರೆ, ಮೇರಿ ಇದೊಂದನ್ನೂ ನೋಡಲಿಲ್ಲ, ಗಂಡಸರಿಗೇ ಮೀಸಲಾದ ಆ ಆವರಣದಲ್ಲಿ ಅವಳಿಗೆ ಪ್ರವೇಶವಿರಲಿಲ್ಲ!

1848ರಲ್ಲಿ ಆಕೆಯ ಪುಸ್ತಕ 'ಫಿಸಿಕಲ್ ಜಿಆಗ್ರಫಿ' ಹೊರಬಂದಿತು. ಈ ಪುಸ್ತಕ ಏಳು ಆವೃತ್ತಿಗಳನ್ನು ಕಂಡು, ರಾಯಲ್ ಜಿಆಗ್ರಫಿ ಸೊಸೈಟಿಯ ಚಿನ್ನದ ಪದಕವನ್ನು ಗಳಿಸಿತು. ಈ ಹೊತ್ತಿಗಾಗಲೇ ಮೇರಿ ತನ್ನ ಕಾಲದ ಸಾಮಾಜಿಕ ವಿಷಯಗಳಲ್ಲಿ ಅತೀವ ಆಸಕ್ತಿ ತೋರಿದ್ದಳು. ಆಕೆಯ ಈ ಪುಸ್ತಕ ಯಥೇಚ್ಛವಾದ ವೈಜ್ಞಾನಿಕ ವಿವರಗಳೊಡನೆ, ಗುಲಾಮಗಿರಿ, ಅಸಮಾನತೆ ಇವುಗಳನ್ನು ಕುರಿತ ಅವಳ ವೈಯಕ್ತಿಕ ನಿಲುವುಗಳನ್ನು ಪ್ರತಿಬಿಂಬಿಸಿತ್ತು. 1866ರಲ್ಲಿ 'ಮಹಿಳೆಯರಿಗೆ ಮತ ಚಲಾಯಿಸುವ ಹಕ್ಕನ್ನು ಬೇಡಿದ ಮನವಿ'ಯಲ್ಲಿ ಮೇರಿಯ ಹೆಸರು ಮೊಟ್ಟ ಮೊದಲನೆಯದಾಗಿತ್ತು. ಮೇರಿ ಮತ್ತೆರಡು ಮಹತ್ವದ ಕೃತಿಗಳನ್ನು ಪ್ರಕಟಿಸಿದಳು. ಒಂದು 'ಆನ್ ಕರ್ವ್ಸ್ ಅಂಡ್ ಸರ್ಫೇಸಸ್ ಆಫ್ ಹೈಯರ್ ಆರ್ಡರ್ಸ್' ಎಂಬ ಕೃತಿ. ಮತ್ತೊಂದು ಆಕೆಯ ಕೊನೆಯ ಬೃಹತ್ ಅಧ್ಯಯನ ಗ್ರಂಥ, ಆಕೆ 89ನೇ ವರ್ಷದಲ್ಲಿದ್ದಾಗ ಹೊರಬಂದಿತು. ಅತ್ಯಂತ ಇತ್ತೀಚಿನ ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರಗಳ ವಿವರಗಳನ್ನು ಸಂಗ್ರಹಿಸಿ ಒಳಗೊಂಡ ಈ ಪುಸ್ತಕದ ಹೆಸರು 'ಮಾಲೆಕ್ಯುಲರ್ ಅಂಡ್ ಮೈಕ್ರೋಸ್ಕೋಪಿಕ್ ಸೈನ್ಸ್'. 1872ರಲ್ಲಿ ಆಕೆಯ ಸಾವಿನ ಹೊತ್ತಿಗೆ, ಮೇರಿ, ಅಂತರಾಷ್ಟ್ರೀಯ ಗೌರವಕ್ಕೆ ಪಾತ್ರವಾಗಿದ್ದಳು. ಆಕೆಯ ಮರಣದ ನಂತರ ಆಕೆಯ ಬೃಹತ್ ಗ್ರಂಥಾಲಯವನ್ನು 'ಗರ್ಟನ್ ಕಾಲೇಜಿ'ಗೆ ನೀಡಲಾಯಿತು. ಹೆಣ್ಣಾಗಿ ಕಲಿಯಲು ತಾನು ಎದುರಿಸಿದ ಅಡೆತಡೆಗಳನ್ನು ನೆನೆದು ಮೇರಿ ಸೋಮರವಿಲ್, ಒಂದು 'ಆಕ್ಸ್‌ಫರ್ಡ್ ಮಹಿಳಾ ಕಾಲೇಜು' ತೆರೆಯಲು ಹಣ ಬಿಟ್ಟು ಹೋಗಿದ್ದಳು. ಮುಂದೆ 1879ರಲ್ಲಿ 'ಸೋಮರ್‌ವಿಲ್ ಮಹಿಳಾ ಕಾಲೇಜು' ಸ್ಥಾಪಿತವಾಗಿ ಇಂದಿಗೂ ಆಕೆಯ ಹೆಸರು ಹೊತ್ತು ನಿಂತಿದೆ.

ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ಪ್ರಗತಿಪರ ತೀರ್ಪು

- ಹೇಮಲತಾ ಮಹಿಷಿ

19ನೇ ಶತಮಾನದ ಮಧ್ಯಭಾಗದಿಂದೀಚೆಗೆ ಇಲ್ಲಿಯವರೆಗೆ ಮಹಿಳಾ ಪರವಾಗಿ, ಮಹಿಳೆಯರಿಗೆ ಸಮಾನ ಸ್ಥಾನ-ಮಾನ, ಸಮಾನ ಹಕ್ಕುಗಳನ್ನು ಕೊಡುವ ಉದ್ದೇಶದಿಂದ ಅನೇಕ ಹೊಸ ಕಾನೂನುಗಳನ್ನು ಮಾಡಲಾಗಿದೆ. ಜಾರಿಯಲ್ಲಿರುವ ಕಾನೂನಿಗೆ ತಿದ್ದುಪಡಿಯನ್ನು ಮಾಡಲಾಗಿದೆ. ಹಾಗೆಯೇ, ನ್ಯಾಯಾಲಯಗಳು, ಅದರಲ್ಲೂ ಸರ್ವೋಚ್ಚ ನ್ಯಾಯಾಲಯ, ಕಾನೂನು ಇಲ್ಲದಾಗ ಅಥವಾ ಕಾನೂನಿನಲ್ಲಿ ನ್ಯೂನತೆ ಇರುವಾಗ ಕೂಡಾ, ತಮ್ಮ ತೀರ್ಪುಗಳ ಮೂಲಕ ಹೊಸ ಕಾನೂನನ್ನು ಸೃಷ್ಟಿಸಿವೆ. ಹಾಗೂ ಮಹಿಳೆಯರಿಗೆ ನ್ಯಾಯ ಒದಗಿಸಲು ಕಾನೂನನ್ನು ಅರ್ಥೈಸಿವೆ. ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ಒಂದು ತೀರ್ಪು ಮಹಿಳೆಯರನ್ನು ಪುರುಷರು ತಮ್ಮ ಕ್ಷಣಿಕ ಕಾಮತೃಪ್ತಿಗಾಗಿ ಉಪಯೋಗಿಸಿಕೊಂಡು, ನಂತರ ಮಗುವಿನೊಂದಿಗೆ ಅವರನ್ನು ಅನಾಥರನ್ನಾಗಿಸುವುದರ ವಿರುದ್ಧದ ಮಹಿಳಾ ಹೋರಾಟಕ್ಕೆ ಬಲ ತಂದು ಕೊಟ್ಟಿದೆ.

ಕಥೆ ಆರಂಭವಾದುದು ಹೀಗೆ. ಅಪೀಲುದಾರ ದ್ವಾರಕಾಪ್ರಸಾದ್, 1ನೇ ಎದುರುದಾರಳಾದ ವಿದ್ಯುತ್ತಳ ಅಣ್ಣನ ಗೆಳೆಯನಾಗಿದ್ದ. ಅವಿವಾಹಿತನಾಗಿದ್ದ ಅವನು ಜ್ಯೂನಿಯರ್ ಎಂಪ್ಲಾಯ್‌ಮೆಂಟ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದು ಆಗಾಗ್ಗೆ ವಿದ್ಯುತ್ತಳ ಅಣ್ಣನ ಮನೆಗೆ ಹೋಗುತ್ತಿದ್ದ. ಅಪೀಲುದಾರ ಹಾಗೂ 1ನೇ ಎದುರುದಾರಳ ನಡುವೆ ಸ್ನೇಹ ಪ್ರೇಮವಾಗಿ ಮಾರ್ಪಟ್ಟು, ಅವನು ವಿವಾಹಪೂರ್ವದ ಲೈಂಗಿಕ ಸಂಬಂಧಕ್ಕೆ ಅವಳನ್ನು ಒತ್ತಾಯಿಸತೊಡಗಿದ. ಅವಳು ಅದನ್ನು ವಿರೋಧಿಸುತ್ತಿದ್ದುದರಿಂದ ದೇವರ ಆಣೆ ಮಾಡಿ ಅವಳನ್ನು ಮದುವೆಯಾಗುವುದಾಗಿ ನಂಬಿಸಿದ. ಫಲವಾಗಿ 1ನೇ ಪ್ರತಿವಾದಿ ಗರ್ಭಿಣಿಯಾದಳು. ತನ್ನನ್ನು ಮದುವೆಯಾಗುವಂತೆ ಒಂದೇ ಸಮನೆ ಅವಳು ಒತ್ತಾಯಿಸತೊಡಗಿದಾಗ ಅಪೀಲುದಾರ ಒಂದಲ್ಲ ಒಂದು ಕಾರಣದ ಮೇಲೆ ನೆಪವೊಡ್ಡಿ ಮದುವೆಯನ್ನು ನಿರಾಕರಿಸುತ್ತಾ ಬಂದ. 1ನೇ ಪ್ರತಿವಾದಿ, ರಾಜ್ಯದ ಮುಖ್ಯಮಂತ್ರಿಗಳನ್ನೂ ಒಳಗೊಂಡು ಅನೇಕ ಮೇಲಧಿಕಾರಿಗಳಿಗೆ ಈ ಬಗ್ಗೆ ದೂರುಕೊಟ್ಟಳು. ಅದು ಪರಿಣಾಮಕಾರಿಯಾಗದಾದಾಗ ಅಪೀಲುದಾರನ ಕಚೇರಿಯ ಎದುರು ಉಪವಾಸ ಸತ್ಯಾಗ್ರಹ ಆರಂಭಿಸಿದಳು. ಉಪವಿಭಾಗಾಧಿಕಾರಿ ಹಾಗೂ ಮತ್ತಿತರರ ಮಧ್ಯಸ್ಥಿಕೆಯಿಂದಾಗಿ ಸಾಕ್ಷಿದಾರರ ಎದುರು ನಯಾಘರ್‌ನ ಜಗನ್ನಾಥ ದೇವಾಲಯದಲ್ಲಿ ವಿವಾಹದ ಏರ್ಪಾಟಾಯಿತು. ವಿವಾಹದ ನಂತರ ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋಗುವಾಗ ಅಪೀಲುದಾರ ತನ್ನ ತಂದೆ ಅವಳನ್ನು ಸೊಸೆಯಾಗಿ ಸ್ವೀಕರಿಸಲು ನಿರಾಕರಿಸಬಹುದು ಎಂದು ಕಾರಣ ಹೇಳಿ, ಅವಳನ್ನು ತನ್ನ ತಂದೆಯ ಮನೆಯಲ್ಲಿಯೇ ಇರುವಂತೆ ಒಪ್ಪಿಸಿದ. ಆಗ ಅವಳು ಗರ್ಭಿಣಿ ಇದ್ದು ಸದ್ಯದಲ್ಲಿಯೇ ಹೆರಿಗೆಯಾಗಲಿರುವುದರಿಂದ ಅದಕ್ಕೆ ಒಪ್ಪಿ ತನ್ನ ತಂದೆಯ ಮನೆಗೆ ಹೋದಳು. ಮುಂದೆ 3-4 ದಿನಗಳಲ್ಲಿಯೇ ಎರಡನೇ ಪ್ರತಿವಾದಿ, ಹೆಣ್ಣುಮಗುವಿನ ಜನನವಾಯಿತು. ಆ ನಂತರ ಎಷ್ಟು ದಿನಗಳಾದರೂ ಅಪೀಲುದಾರ ಪ್ರತಿವಾದಿಗಳನ್ನು ತನ್ನೊಂದಿಗೆ ಕರೆದೊಯ್ಯಲಿಲ್ಲ. ಅವರ ಪೋಷಣೆಯನ್ನೂ ಮಾಡಲಿಲ್ಲ. ಹಾಗಾಗಿ 1ನೇ ಪ್ರತಿವಾದಿ, ತನಗೆ ಹಾಗೂ ಮಗುವಿಗೆ ಜೀವನಾಂಶ ಕೊಡಿಸುವಂತೆ ಕೇಳಿ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ 125ನೇ ಪ್ರಕರಣದಡಿ ಮ್ಯಾಜಿಸ್ಟ್ರೇಟರ್ ಕೋರ್ಟಿಗೆ ಅರ್ಜಿ ಸಲ್ಲಿಸಿದಳು.

ಆ ಅರ್ಜಿಯನ್ನು ವಿರೋಧಿಸುತ್ತಾ ದ್ವಾರಕಾ ಪ್ರಸಾದ್ ತನಗೆ ಅರ್ಜಿದಾರಳೊಂದಿಗೆ ಯಾವುದೇ ವಿವಾಹಪೂರ್ವ ಲೈಂಗಿಕ ಸಂಬಂಧ ಇರಲಿಲ್ಲವೆಂದೂ, ತನ್ನನ್ನು ಕೊಲ್ಲುವುದಾಗಿ ಹೆದರಿಸಿ ದೇವಸ್ಥಾನಕ್ಕೆ ಕರೆದು ಕೊಂಡು ಹೋಗಿ ಅವಳೊಂದಿಗೆ ಒತ್ತಾಯದಿಂದ ಹಾರ ಬದಲಾಯಿಸಿ ಒಂದು ರೀತಿಯಲ್ಲಿ ವಿವಾಹ ಮಾಡಿದ್ದಾಗಿಯೂ ಅದಕ್ಕೆ ತನ್ನ ಒಪ್ಪಿಗೆ ಇರಲಿಲ್ಲವೆಂದೂ ಆದ್ದರಿಂದ ಅವಳು ತನ್ನ ಹೆಂಡತಿಯಲ್ಲವೆಂದೂ ಹೇಳಿದ.

ಅವನ ವಾದವನ್ನು ತಳ್ಳಿಹಾಕಿದ ಮ್ಯಾಜಿಸ್ಟ್ರೇಟರು ವಿದ್ಯುತ್ತಳಿಗೆ ಹಾಗೂ ಮಗುವಿಗೆ ಜೀವನಾಂಶ ನೀಡುವಂತೆ ಆಜ್ಞೆ ಮಾಡಿದರು. ಆದರೆ, ಸೆಷನ್ಸ್ ನ್ಯಾಯಾಲಯ ಆ ಆಜ್ಞೆಯನ್ನು ತಳ್ಳಿಹಾಕಿ, ಅವರಿಬ್ಬರ ನಡುವೆ ವಿಧಿಪೂರ್ವಕ ವಿವಾಹವಾದ ಬಗ್ಗೆ ಸಾಕ್ಷಿಯಿಲ್ಲವೆಂದು ತೀರ್ಪು ನೀಡಿತು. ಆದರೆ, ಮಗುವಿಗೆ ನೀಡಿದ್ದ ಜೀವನಾಂಶವನ್ನು ಮಾತ್ರ ಮಾನ್ಯ ಮಾಡಿತು. ಕಾರಣವೆಂದರೆ, ಕಾನೂನು ಬಾಹಿರ ಸಂಬಂಧದಿಂದ ಜನಿಸುವ ಮಕ್ಕಳಿಗೂ ತಂದೆಯಿಂದ ಜೀವನಾಂಶ ಪಡೆಯುವ ಹಕ್ಕಿರುತ್ತದೆ.

ಸೆಷನ್ಸ್ ನ್ಯಾಯಾಲಯದ ತೀರ್ಪಿನ ವಿರುದ್ಧ ಸಲ್ಲಿಸಿದ ಮೇಲ್ಮನವಿಯಲ್ಲಿ ಉಚ್ಚನ್ಯಾಯಾಲಯ ವಿವಾಹವನ್ನು ಎತ್ತಿ ಹಿಡಿದು ವಿದ್ಯುತ್ತಳಿಗೂ ಜೀವನಾಂಶ ನೀಡಿತು. ಉಚ್ಚನ್ಯಾಯಾಲಯದ ಈ ತೀರ್ಪಿನ ವಿರುದ್ಧ ದ್ವಾರಿಕಾಪ್ರಸಾದ್ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ.

1ನೇ ಪ್ರತಿವಾದಿಯಾದ ವಿದ್ಯುತ್ತಳಿಗೆ ನೋಟೀಸು ಕಳಿಸುವ ಮೊದಲು ಬಾಕಿ ಉಳಿದಿರುವ ಎಲ್ಲಾ ಜೀವನಾಂಶದ ಹಣವನ್ನು ಠೇವಣಿ ಇಡುವಂತೆ ನ್ಯಾಯಾಲಯ ದ್ವಾರಿಕಾ ಪ್ರಸಾದ್‌ಗೆ ನಿರ್ದೇಶನ ನೀಡಿತು.

ಸರ್ವೋಚ್ಚ ನ್ಯಾಯಾಲಯದ ಮುಂದೆ ಮೊಕದ್ದಮೆಯಲ್ಲಿ ವಾದ-ವಿವಾದ ನಡೆದಾಗ ಎರಡನೇ ಪ್ರತಿವಾದಿ ತನ್ನ ಮಗುವೇ ಅಲ್ಲವೆಂದು ಅಪೀಲುದಾರ ವಾದಿಸಿದ. 1ನೇ ಪ್ರತಿವಾದಿಯಾದ ವಿದ್ಯುತ್ತಳು ಅವನ ಪಿತೃತ್ವವನ್ನು ಸಾಬೀತು ಪಡಿಸಲು ಡಿಎನ್‌ಎ ಪರೀಕ್ಷೆ ನಡೆಸಬೇಕೆಂದು ಕೇಳಿದಾಗ, ಅವನು ಆ ಪರೀಕ್ಷೆಗೆ ಒಳಪಡಲು ಒಪ್ಪಲಿಲ್ಲ. ಫಲಿತಾಂಶವಾಗಿ, ನ್ಯಾಯಾಲಯ ಅವನು ಪಿತೃತ್ವವನ್ನು ನಿರಾಕರಿಸಲು ಅಧಿಕಾರ ಹೊಂದಿಲ್ಲವೆಂದು ತೀರ್ಮಾನಿಸಿತು.

ತಮ್ಮಿಬ್ಬರ ನಡುವೆ ವಿಧಿಪೂರ್ವಕ ವಿವಾಹ ನಡೆದಿಲ್ಲವೆಂದು, ಆದ್ದರಿಂದ ವಿದ್ಯುತ್ತಳಿಗೆ ತಾನು ಜೀವನಾಂಶ ಕೊಡಲು ಬದ್ಧನಲ್ಲವೆಂದು ದ್ವಾರಿಕಾಪ್ರಸಾದ ಪರವಾಗಿ ವಾದಿಸಲಾಯಿತು.

ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ 125ನೇ ಪ್ರಕರಣದಡಿ ಮಹಿಳೆ ತನ್ನ ಗಂಡನಿಂದ ಜೀವನಾಂಶ ಕೊಡಿಸಲು ಕೇಳಿದಾಗ, ಎರಡನೇ ವಿವಾಹದ ಅಪರಾಧದ ಸಂಬಂಧದಲ್ಲಿ ಎರಡನೇ ವಿವಾಹವನ್ನು ಸಾಬೀತು ಪಡಿಸಲು ಬೇಕಾಗುವ ಉನ್ನತ ಮಟ್ಟದ ಸಾಕ್ಷ್ಯ ಇಲ್ಲಿ ಅವಶ್ಯವಿಲ್ಲವೆಂದೂ, ಇಬ್ಬರೂ ಗಂಡ-ಹೆಂಡತಿಯರಂತೆ ಜೀವನ ನಡೆಸಿರುವುದಾಗಿ ತೋರಿಸಿದರೆ ಸಾಕು ಅವರಿಬ್ಬರ ನಡುವೆ ವಿಧಿಪೂರ್ವಕ ವಿವಾಹ ನಡೆದಿರುವುದಾಗಿ ನ್ಯಾಯಾಲಯ ಪರಿಭಾವಿಸ ಬಹುದೆಂದು, ಯಾವುದೇ ರೀತಿಯಲ್ಲಿ ವಿವಾಹ ವಿಧಿಯನ್ನು ನಡೆಸಿರುವುದಾಗಿ ಒಪ್ಪಿಕೊಂಡಾಗ ಎಲ್ಲಾ ವಿಧಿಗಳನ್ನು ಕ್ರಮಬದ್ಧವಾಗಿ ನಡೆಸಲಾಯಿತೇ, ಇಲ್ಲವೇ ಎಂಬ ಬಗ್ಗೆ ಆಳವಾದ ವಿಚಾರಣೆ ನಡೆಸುವುದು ಅವಶ್ಯಕವಿಲ್ಲವೆಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದೆ. 125ನೇ ಪ್ರಕರಣದಡಿ ಹೆಂಡತಿಗೆ ಜೀವನಾಂಶ ನೀಡಲು ವಿವಾಹದ ಬಗ್ಗೆ ಅತಿ ಉನ್ನತ ಮಟ್ಟದ ಸಾಕ್ಷ್ಯಾಧಾರಗಳ ಅವಶ್ಯಕತೆ ಇಲ್ಲವೆಂದೂ, ಇದು ನಿರಾಧಾರಳಾಗಿ ಅನಾಥಳಾಗಿ ಮಹಿಳೆ ಕಷ್ಟಪಡದಂತೆ ಜೀವನಾಧಾರಕ್ಕೆ ಸ್ವಲ್ಪ ಮಟ್ಟಿನ ಆರ್ಥಿಕ ಬೆಂಬಲ ಒದಗಿಸಲು ಇರುವ ಕಾನೂನಾದ್ದರಿಂದ ಗಂಡ-ಹೆಂಡತಿಯರ ವೈವಾಹಿಕ ಸ್ಥಾನ-ಮಾನದ ಬಗ್ಗೆ ಸ್ಥೂಲವಾದ, ಮೇಲ್ಕಾಣಿಸುವ ಸಾಕ್ಷ್ಯ ಸಾಕಾಗುತ್ತದೆಂದೂ ಅವಶ್ಯಕವಿದ್ದಲ್ಲಿ ಗಂಡ, ಸಿವಿಲ್ ನ್ಯಾಯಾಲಯದಲ್ಲಿ ಆ ವಿವಾಹ ವಿಧಿಬದ್ಧ ವಿವಾಹವಲ್ಲವೆಂದು ದಾವೆ ಹೂಡಿ, ಡಿಕ್ರಿ ಪಡೆದರೆ ಮಾತ್ರ ಜೀವನಾಂಶಕ್ಕೆ ಹೊಣೆಗಾರ ನಾಗುವುದಿಲ್ಲವೆಂದೂ ಅಲ್ಲಿಯವರೆಗೆ ಅವಳಿಗೆ ಜೀವನಾಂಶ ಕೊಡಬೇಕಾಗುವುದೆಂದೂ ತೀರ್ಪು ನೀಡಿದೆ.

ಮಹಿಳೆಯರ ಹಕ್ಕುಗಳ ರಕ್ಷಣೆಗೆ ನ್ಯಾಯಾಲಯ ಮುಂದಾದ ಮಹತ್ವದ ತೀರ್ಪುಗಳಲ್ಲಿ ಇದೂ ಒಂದಾಗಿದೆ.

❑

ಪ್ರೀತಿಯ ಅಚಲ

ಪ್ರೀತಿಯ ಅಚಲ

ಮಹಿಳೆಯರ ಮಿದುಳಿನ ಆಕಾರದ ಬಗ್ಗೆ ವಿಚಾರವಂತಿಕೆಯ ಬಗ್ಗೆ ಅನಗತ್ಯ ಚರ್ಚೆ ನಡೆದಿರುವ ಹೊತ್ತಿನಲ್ಲೇ, ನಾನು ಇತ್ತೀಚೆಗೆ ಓದಿದ ಹಳೆಯ ಪುಸ್ತಕದ ಸಣ್ಣ ಘಟನೆ ನೆನಪಾಗುತ್ತಿದೆ. ಮೈಸೂರಿನ ಆಸ್ಥಾನ ವಿದ್ವಾನ್ ಕೆ. ವಾಸುದೇವಾಚಾರ್ಯರು ತಮ್ಮ **ನೆನಪುಗಳು** ಪುಸ್ತಕದಲ್ಲಿ ಈ ಘಟನೆಯನ್ನು ದಾಖಲಿಸಿದ್ದಾರೆ. ಬಹುಶಃ ಅವರು ಇದನ್ನು ನೆನಪು ಮಾಡಿಕೊಳ್ಳದಿದ್ದರೆ ಈ ಸಂದರ್ಭವೂ ಮಹಿಳೆಯರು ಅನೇಕ ನಷ್ಟ ಚರಿತ್ರೆಯ ಅಲಿಖಿತ ಸಂಗ್ರಹಕ್ಕೆ ಸೇರಿಹೋಗುತ್ತಿತ್ತು. ಬರೆದು ಇದನ್ನು ನೆನಪಾಗಿ ಉಳಿಸಿದ ವಾಸುದೇವಾಚಾರ್ಯರಿಗೆ ನಮ್ಮ ಮೊದಲ ವಂದನೆ ಸಲ್ಲಬೇಕು.

ಆಸ್ಥಾನದ ಸಂಗೀತಗಾರರು ತಮ್ಮ ಬಿಡುವಿನ ವೇಳೆಯನ್ನು ಚದುರಂಗ ಇಸ್ಪೀಟುಗಳನ್ನಾಡುತ್ತಾ ಕಳೆಯುತ್ತಿದ್ದರಂತೆ. ಹೀಗಿದ್ದಾಗ ಒಮ್ಮೆ ಉತ್ತರಭಾರತದಿಂದ ಅಶ್ವಗಳನ್ನು ಮಾರಲು ಬಂದ ವ್ಯಾಪಾರಿ ಚದುರಂಗದಾಟದಲ್ಲಿ ಪರಿಣಿತ ಎಂದು ಹೆಸರುಗಳಿಸಿದ್ದವನು. ಈ ಜನರ ಜೊತೆಯಲ್ಲಿ ಚದುರಂಗವಾಡಲು ಬಯಸಿದ. ಇದು ಊರು ಮತ್ತು ಸಂಸ್ಥಾನದ ಮರ್ಯಾದೆಯ ಪ್ರಶ್ನೆ. ಈ ಆಸ್ಥಾನಿಗಳು ತಮ್ಮ ತಮ್ಮೊಳಗೇ ಸಾಕಷ್ಟು ಚರ್ಚಿಸಿ ಅತಿ ಚೆನ್ನಾಗಿ ಆಡುವವನನ್ನು ಆಡಲು ಕೂಡಿಸಿದರು. ಈ ಆಟದಲ್ಲಿ ಎಂದೂ ಎಲ್ಲಿಯೂ ಸೋಲದ ಆ ವ್ಯಾಪರಿ ಸೋತೇ ಹೋದ. 'ಅಬ್ಬಾ ಎಂತಹ ಅದ್ಭುತ ಆಟ' ಎಂದು ಉದ್ಗರಿಸಿದ. ಆಗ ಅಲ್ಲಿ ಜಮಾಯಿಸಿದ ಒಬ್ಬ ಅಧಿಕಾರಿ 'ಇದೆಂತಹ ಮಹಾ ಆಟ ನಮ್ಮ ಅರಸಿನ ಮಗಳ ಜೊತೆ ಆಡಿ ಗೆಲ್ಲಿ' ಎಂದು ಪಂಥ ಒಡ್ಡಿದ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲವದು. ಮಹಾರಾಜರ ಸಂಬಂಧಿಯೊಬ್ಬರ ಮಗಳು ಚದುರಂಗದಲ್ಲಿ ಚತುರೆ ಎನ್ನುವ ಹೆಸರನ್ನು ಗಳಿಸಿದ್ದಳು. ಅವಳು ಹೇಳಿ ಕೇಳಿ ಅರಸು ಕುಟುಂಬದವಳು. ಈ ಕುದುರೆ ವ್ಯಾಪಾರಿಯೇ ಉತ್ತರಭಾರತದವನು. ಇವನೆಲ್ಲಿ ಅವಳೆಲ್ಲಿ ಇದೆಲ್ಲಾ ಆಗಹೋಗದ ಕೆಲಸ ಎಂದರು ಎಲ್ಲರೂ. ಆದರೂ ಆ ವ್ಯಾಪಾರಿಗೆ ಆಕೆಯೊಂದಿಗೆ ಒಂದೇ ಒಂದು ಬಾರಿ ಚದುರಂಗ ಆಡಿಯೇ ಬಿಡಬೇಕೆಂಬ ಉತ್ಕಟ ಇಚ್ಛೆ. ಪ್ರತಿನಿತ್ಯ ಆ ಅರಸರಮನೆ ಮುಂದೆ ನಿಲ್ಲುವುದು ಆತ ಹೊರಬಂದಾಗ ನಮಸ್ಕರಿಸುವುದು ಹೀಗೇ ನಡೆಯಿತು. ಒಮ್ಮೆ ಆ ಅರಸರು ''ಯಾಕೆ ಹೀಗೆ ಪ್ರತಿನಿತ್ಯ ನಿಲ್ಲುತ್ತೀ' ಎಂದಾಗ ಈತ ತನ್ನ ಅಭಿಲಾಷೆ ತಿಳಿಸಿದ. ಅರಸು ಮನೆಯ ಮಹಿಳೆಯರು ಘೋಷಾ ಪದ್ಧತಿ ಅನುಸರಿಸುತ್ತಿದ್ದರು. ಆದರೂ ತಮ್ಮ ಮಗಳ ಬುದ್ಧಿವಂತಿಕೆಯ ಬಗ್ಗೆ ಹೃದಯದ ಮೂಲೆಯಲ್ಲಿ ಅಭಿಮಾನ ಆತನಿಗೆ. ''ನಾಳೆ ಬಾ ನನ್ನ ಮಗಳನ್ನು ಕೇಳಿ ಹೇಳುವೆ'' ಎಂದರು. ಹುಡುಗಿ ಒಂದು ಶರತ್ತು ಹಾಕಿದಳು. ಒಂದು ಪರದೆಗೆ ಸಣ್ಣ ಕಿಂಡಿ ಮಾಡಿ ಅದರ ಹಿಂದೆ ಈಕೆ ಕುಳಿತು ಕೊಳ್ಳುವುದು. ಅಪ್ಪ ತಾನು ಹೇಳಿದ ಕಾಯಿಯನ್ನು ಆ ವ್ಯಾಪಾರಿಯ ಮುಂದೆ ಕುಳಿತು ನಡೆಸುವುದು ಎಂದಾಯಿತು. ಆಟ ಪ್ರಾರಂಭಿಸುವ ಮುನ್ನ ಪರದೆಯ ಹಿಂದಿದ್ದ ಆಕೆ ಕೇಳಿದಳು ''ಅಪ್ಪ ಆತನನ್ನು ಕೇಳಿ ಯಾವ ಸಿಪಾಯಿಯಿಂದ ಆತನ ರಾಜನನ್ನು ಕಟ್ಟಿಹಾಕಬೇಕು ನಾನು? ಆ ಸಿಪಾಯಿಯನ್ನು ಆರಿಸಿಕೊಳ್ಳಲು ತಿಳಿಸಿ'' ಎಂದು ವ್ಯಾಪಾರಿಗೆ ಕಕ್ಕಾಬಿಕ್ಕಿ. ಆಟಕ್ಕೆ ಮುಂಚೆಯೇ ತನ್ನ ರಾಜನ ಸೋಲನ್ನು ನಿರ್ಧರಿಸುವಂತೆ ತಿಳಿಸುತ್ತಿರುವ ಆ ಹುಡುಗಿಯ ಆತ್ಮಸ್ಥೈರ್ಯಕ್ಕೆ ಆತ ನಡುಗಿ ಹೋದ. ಅರೆಮನಸ್ಸಿನಿಂದಲೇ ಮುಂದಿದ್ದ ಒಂದು ಸಿಪಾಯಿಕಡೆ ಬೆರಳು ತೋರಿಸಿದ ನಡೆಯಲ್ಲಿ ಅದೇ ಸಿಪಾಯಿಯಿಂದ ಆ ಹುಡುಗಿ ವ್ಯಾಪಾರಿಯ ರಾಜನನ್ನು ಎಲ್ಲೂ ಚಲಿಸದಂತೆ ಕಟ್ಟಿ ಹಾಕಿಬಿಟ್ಟಿದ್ದಳು! ಆತ ಸ್ಥಂಭೀ ಭೂತನಾಗಿ ಹೋದ!!

ಅರಸು ಮನೆತನದ ಹುಡುಗಿಯಾದ್ದರಿಂದ ಕಳೆದ ಶತಮಾನದ ಪ್ರಾರಂಭದಲ್ಲಿದ್ದ ಈಕೆಯ ಬಗ್ಗೆ ಶ್ರೀ ವಾಸುದೇವಾಚಾರ್ಯರ ಪುಸ್ತಕದಲ್ಲಿ ಅದರಲ್ಲಿ ದಾಖಲಾಗಿ ಉಳಿಯಿತು. ಇನ್ನೂ ಸಾಮಾನ್ಯರಲ್ಲಿ ಇಂತಹ ಜಾಣತನಗಳು ಎಲ್ಲೆಲ್ಲಿ ಎಷ್ಟೆಷ್ಟಿತ್ತೋ ಬಲ್ಲವರ್‍ಯಾರು? ಅವೆಲ್ಲಾ ಇತಿಹಾಸದ ಗರ್ಭದಲ್ಲಿ ಮುಳುಗಿ ಹೋಗಿದೆಯಲ್ಲವೇ?

ಶತಭಿಷಾ.

ಮಹಿಳೆಯರಿಗೆ ಮಾರ್ಗದರ್ಶಿ—ಶ್ರೀಮತಿ ಹೆಡ್‌ವಿಗ್ ಅನೌರ್

ಶಾಂತ ನಾಗರಾಜ್

ಸಿಂಗಪುರದ ಅವೇರ್ ಸಂಸ್ಥೆಯಲ್ಲಿ(The Association of women for Action and Research) ಎಪ್ಪತ್ತು ವರ್ಷದ ಮಹಿಳೆ ಅತಿ ಚಟುವಟಿಕೆಯಿಂದ ಪ್ರತಿಯೊಂದನ್ನು ನಿಭಾಯಿಸುತ್ತಿದುದನ್ನು ಕಂಡಾಗ ನನಗೆ ಆಶ್ಚರ್ಯವಾಯಿತು. ಅಷ್ಟೇನೂ ಎತ್ತರವಿಲ್ಲದ, ಕೃಶಾಂಗಿಯಾದ ಶ್ರೀಮತಿ ಹೆಡ್‌ವಿಗ್‌ಗೆ ಎಪ್ಪತ್ತು ವರ್ಷ ಎಂದು ನನ್ನ ಪರಿಚಿತರು ಹೇಳಿದಾಗ ನಿಜಕ್ಕೂ ನನಗೆ ನಂಬಲಾಗಲಿಲ್ಲ. ನಲವತ್ತು, ಐವತ್ತು ವರ್ಷದವರಂತೆ ತೋರುವ ಆಕೆ ಅವೇರ್‌ಸಂಸ್ಥೆಯ ಆಧಾರ ಸ್ಥಂಬ. ಈ ವಯಸ್ಸಿನಲ್ಲೂ ಪ್ರತಿದಿನ ಎರಡು ಹೊತ್ತೂ ಆಕೆ ಸಂಸ್ಥೆಯ ಆಫೀಸಿಗೆ ಬರುತ್ತಾರೆ. ಅಗತ್ಯವಿರುವವರಿಗೆ ಆಕೆಯ ಸಹಾಯ ಹಸ್ತ ಯವಾಗಲೂ ಲಭ್ಯವಿರುತ್ತದೆ.

ಅವೇರ್ ಸಂಸ್ಥೆ 1985ರಲ್ಲಿ ಪ್ರಾರಂಭವಾಯಿತು. ಯಾವ ರಾಜಕೀಯ ಪಕ್ಷಕ್ಕೆ ಸೇರದ, ಯಾವ ಜಾತಿ ಮತ್ತು ಮತಗಳ ಮುಖವಾಣಿಯಾಗದ, ಸರ್ಕಾರದ ಧನಸಹಾಯವನ್ನು ತೆಗೆದುಕೊಳ್ಳದ ಈ ಸಂಸ್ಥೆ ಕೇವಲ್ಲ ಮಹಿಳೆಯರಿಂದ ಮಹಿಳೆಯರಿಗಾಗಿ ಮಾತ್ರ ದುಡಿಯುತ್ತಿರುವಂಥದ್ದು. ಈ ಸಂಸ್ಥೆಯ ಮುಖ್ಯ ಮೂರು ಕಾರ್ಯ ಚಟುವಟಿಕೆಯೆಂದರೆ, 1) ಮಹಿಳೆಯರ ಸಂಬಂಧಿತವಾದ ವಿಚಾರಗಳ ಬಗ್ಗೆ ಅಧ್ಯಯನ ನಡೆಸುವುದು, ಇದರಲ್ಲಿ ಜನಸಂಖ್ಯಾನೀತಿ, ಮಹಿಳೆಯ ಮೇಲಾಗುವ ದೌರ್ಜನ್ಯ, ಮಹಿಳಾ ಆರೋಗ್ಯ ಮತ್ತು ಉದ್ಯೋಗ. 2) ಪ್ರಕಟಣೆಗಳ ಮುಖಾಂತರ ಸಾಮಾಜಿಕ ಶಿಕ್ಷಣ, ಒಕ್ಕೂಟದ ಮುಖಾಂತರ ಭಾಷಣಗಳನ್ನೇರ್ಪಡಿಸುವುದು, ಇದಕ್ಕೆ ಸಂಬಂಧ ಪಟ್ಟ ವಸ್ತು ಪ್ರದರ್ಶನ, ವಿಚಾರಗೋಷ್ಠಿಗಳು, ಮತ್ತು ಅಲ್ಪಾವಧಿಯ ಕೋರ್ಸ್‌ಗಳನ್ನು ನಡೆಸುವುದು. 3) ದೂರವಾಣಿಯ ಮುಖಾಂತರ ಅಗತ್ಯವಿರುವ ಮಹಿಳೆಗೆ ಸಲಹೆಗಳನ್ನು ಕೂಡುವುದು. ಆಪ್ತಸಲಹೆಯನ್ನು ಪರಿಣಿತರಿಂದ ಕೊಡಿಸುವುದು. ಕಾನೂನು ಸಲಹೆ, ವೈದ್ಯಕೀಯ ಸಲಹೆ ಇತ್ಯಾದಿಗಳ ಉಚಿತಸೇವೆ ಮತ್ತು ಗ್ರಂಥಾಲಯ, ಗಣಕ ಜ್ಞಾನ ಮತ್ತು ಇತರ ಅಗತ್ಯ ಶಿಕ್ಷಣ. ಇದು ಅವೇರ್ ಸ್ಥೂಲ ಪರಿಚಯ.

ಅವೇರ್‌ನ ಪ್ರಾರಂಭಿಕ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿರುವ ಶ್ರೀಮತಿ ಹೆಡ್‌ವಿಗ್‌ರವರು ಸಕ್ರಿಯವಾಗಿ ಈ ಸಂಸ್ಥೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಎಷ್ಟೇ ಮುಂದುವರೆದ ದೇಶವಾಗಿದ್ದರೂ ಮಹಿಳೆಯರ ಪಾಲಿಗೆ ಬರುವ ಸಂಕಷ್ಟಗಳು, ಒತ್ತಡದಲ್ಲಿ ಎಲ್ಲ ದೇಶಗಳಿಗೂ ಸಾಮ್ಯವಿರುತ್ತದೆ ಎನ್ನುವುದಕ್ಕೆ ಶ್ರೀಮತಿ ಹೆಡ್‌ವಿಗ್‌ರವರ ಬದುಕೇ ಸಾಕ್ಷಿ. ಮಲೇಶಿಯಾದ ಜೋಹರ್‌ಬಾರುವಿನ್ನಿಯಲ್ಲಿ ಹುಟ್ಟಿದ ಹೆಡ್‌ವಿಗ್ ತಮ್ಮ ಬಾಲ್ಯದ ಬಗ್ಗೆ ಹೀಗೆ ಹೇಳುತ್ತಾರೆ ''ನಾವು ಯುರೇಶಿಯನ್ನರು (ನಮ್ಮಲ್ಲಿ ಆಂಗ್ಲೋ ಇಂಡಿಯನ್‌ರಂತೆ) ವಿದ್ಯೆಗೇ ಮಹತ್ವ ಕೊಡುವವರು. ನಮ್ಮ ತಂದೆ ತಾಯಿಗಳಿಗೆ ನಾವು ಸಾಲಾಗಿ ಐದು ಜನ ಹೆಣ್ಣು ಮಕ್ಕಳು ಕೊನೆಗೊಬ್ಬ ತಮ್ಮ. ನಮ್ಮ ತಂದೆಗೆ ನಾವೆಲ್ಲ ಹುಟ್ಟಿದಾಗ ಸಾಲಾಗಿ ಹೆಣ್ಣು ಮಕ್ಕಳೇ ಹುಟ್ಟಿದರೆಂದೇನೂ ಬೇಸರವಿಲ್ಲ. ಆದರೆ ನಮ್ಮ ತಾಯಿಗೆ ಮಾತ್ರ ತಮ್ಮನನ್ನು ಕಂಡರೆ ಹೆಚ್ಚು ಅಕ್ಕರೆ'' ಆರ್ಥಿಕವಾಗಿ ಮಧ್ಯಮ ವರ್ಗದ ಕುಟುಂಬ. 1942ರಲ್ಲಿ ಜಪಾನ್, ಮಲೇಷಿಯಾ, ಸಿಂಗಪುರಗಳನ್ನು ಯುದ್ಧದ ಮುಖಾಂತರ ಗೆದ್ದಾಗ ಸಾಮಾನ್ಯರ ಜೀವನ ಅನೇಕ ಏರುಪೇರುಗಳನ್ನು ಕಂಡಿತು. ಹೆಣ್ಣು ಮಕ್ಕಳು ಶಾಲೆಗೆ ಹೋಗುವುದು ಸುರಕ್ಷಿತವಲ್ಲವೆಂಬ ಕಾರಣಕ್ಕೆ ಹದಿಮೂರು ವರ್ಷದ ಹೆಡ್‌ವಿಗ್‌ರವರನ್ನು ಹದಿನಾಲ್ಕು ವರ್ಷದ ಅವರಕ್ಕನನ್ನೂ ಶಾಲೆ ಬಿಡಿಸಿ ಮನೆಯಲ್ಲಿ ಪುಟ್ಟಮಕ್ಕಳನ್ನೂ ಮತ್ತು ರೋಗಗ್ರಸ್ಥ ತಾಯಿಯನ್ನೂ ನೋಡಿಕೊಳ್ಳಲು ಇರಿಸಿಕೊಳ್ಳಲಾಯಿತು. ಆ ದಿನಗಳನ್ನು ನೆನೆಯುತ್ತಾ ಆಕೆ ಹೇಳುತ್ತಾರೆ ''ನನಗೆ ಓದುವುದೆಂದರೆ ಪಂಚಪ್ರಾಣ ಮನೆಗೆಲಸಗಳನ್ನು ಬೇಗಬೇಗ ಮಾಡಿ ಮುಗಿಸಿ ಮೆಲ್ಲಗೆ ನನ್ನ ತಂದೆಯು ಶೇಖರಿಸಿಟ್ಟಿದ ಗ್ರಂಥಗಳಿಗೆ ಲಗ್ಗೆಯಿಡುತ್ತಿದೆ. ಏನೇನು ಕೈಗೆ ಸಿಗುತ್ತಿತ್ತೋ ಅವೆಲ್ಲವನ್ನೂ ಓದುತ್ತಿದ್ದೆ. ಹೀಗೆ ಓದುವಾಗಲೇ ನನ್ನ ಆಸಕ್ತಿ ಇಂಗ್ಲೀಷ್ ಸಾಹಿತ್ಯದತ್ತ ಹೊರಳಿತು'' ಎನ್ನುತ್ತಾರೆ. ಅಲ್ಲದೆ ಆಕೆ ತಮ್ಮ ಹದಿಮೂರನೆ ವಯಸ್ಸಿನಲ್ಲೇ ಸ್ತ್ರೀವಾದಿ ಲೇಖಕಿಯರಾದ, ಮೇರಿ ವುಲ್‌ಸ್ಟೋನ್‌ಕ್ರಾಫ್ಟ್, ಆಲಿವ್‌ಶ್ರೈನರ್‌ರವರ story of an African farm, ವರ್ಜೀನಿಯಾ ವೂಲ್ಫ್‌ರ Three Guineas ಮತ್ತು 'A Room of one's own' ರೋಸ್‌ಮೆಕಾಲೆ, ರೆಬೆಕ್ಕಾವೆಸ್ಟ್ ಹಾಗೂ ರಾಡ್‌ಕ್ಲಿಫ್ ಹಾಲ್‌ರThe weel of loneliness ಇತ್ಯಾದಿಗಳನ್ನು ಓದಿದ್ದರ ಪರಿಣಾಮವಾಗಿ ಸಣ್ಣ ವಯಸ್ಸಿನಲ್ಲೇ ಸ್ತ್ರೀಯರ ಅಸಮಾನತೆಯನ್ನು ಕುರಿತು ಚಿಂತಿಸುವ ನೀತಿ ಬೆಳೆದದ್ದರ ಫಲವಾಗಿ ಈ ದಿನ ಅವೇರ್ ಎನ್ನುವ ಸಂಸ್ಥೆ ಹುಟ್ಟಿಹಾಕುವುದಕ್ಕೆ ಕಾರಣವಾಗಿದೆ.

1942ರಲ್ಲಿ ನಿಂತ ಹೆಡ್‌ವಿಗ್‌ರ ವಿದ್ಯಾಭ್ಯಾಸ 1949ರಲ್ಲಿ ಮತ್ತೆ ಮಲೇಷಿಯಾದ ರ್‍ಯಾಫಲ್ಸ್ ಕಾಲೇಜಿನಲ್ಲಿ ಮುಂದುವರೆಯಿತು. ಆದರೆ ಯುದ್ಧದ ದಿನಗಳಲ್ಲಿ ಅವರ ತಂದೆಯ ಉಳಿತಾಯದ ಹಣವೆಲ್ಲ ದೊಡ್ಡ ಸಂಸಾರವನ್ನು ತೂಗಿಸುವುದರಲ್ಲೇ

ಕರಗಿಹೋಗಿದ್ದರಿಂದ ಹೆಡ್‌ವಿಗ್‌ರ ಅಕ್ಕ ಸಂಗೀತದ ಪಾಠಗಳನ್ನೂ ಹೆಡ್‌ವಿಗ್‌ರು ಇಂಗ್ಲೀಷ್ ಪಾಠಗಳನ್ನು ಹೇಳಿ ಕೊಡುತ್ತಾ ತಮ್ಮ ವಿದ್ಯಾಭ್ಯಾಸದ ಖರ್ಚನ್ನು ತೊಡಗಿಸಿ ಕೊಳ್ಳಬೇಕಾಯಿತು. ಹೀಗೆ ಒಂದೆಡೆ ಪಾಠ ಹೇಳುತ್ತಾ ಒಂದೆಡೆ ಕಲಿಯುತ್ತಾ 1950ರಲ್ಲಿ ಇಂಗ್ಲೀಷ್ ಸಾಹಿತ್ಯದ ಆನರ್ಸ್ ಪದವಿಯನ್ನು ಫಸ್ಟ್ ಕ್ಲಾಸ್‌ನಲ್ಲಿ ಪಡೆದರು. ತಮ್ಮ ಪದವಿಯ ಬಗ್ಗೆ ಹೇಳುತ್ತಾ "ನಾನು ನನ್ನ ಆನರ್ಸ್ ತರಗತಿಯಲ್ಲಿ ಒಬ್ಬಳೇ ಹುಡುಗಿಯಾಗಿದ್ದೆ ಮತ್ತು ಇಡೀ ತರಗತಿಗೆ ನನಗೊಬ್ಬಳಿಗೇ ಫಸ್ಟ್‌ಕ್ಲಾಸ್ ಸಿಕ್ಕಿದ್ದು" ಎನ್ನುತ್ತಾರೆ. ಗಮನಿಸಿ 1950ರಲ್ಲಿಯೂ ಮಲೇಷಿಯಾದಲ್ಲಿ ಮಹಿಳಾ ವಿದ್ಯಾಭ್ಯಾಸ ಯಾವ ಹಂತದಲ್ಲಿತ್ತೆಂಬುದನ್ನು! ಆವೇಳೆಗೆ ಭಾರತದಲ್ಲಿ ಅನೇಕ ಜನ ಮಹಿಳೆಯರು ಪದವೀಧರೆಯಾಗಿದ್ದರು.

ಹೆಡ್‌ವಿಗ್‌ರಿಗೆ ಮುಂದೆ ಓದುವ ಹಂಬಲ. ಆಗಿನ್ನೂ ಮಲೇಷಿಯಾ ಬ್ರಿಟಿಷರ ಕೈಯಲ್ಲಿದ್ದ ಕಾಲ. ಆಕೆ ಕ್ವೀನ್ಸ್ ಸ್ಕಾಲರ್‌ಷಿಪ್‌ಗೆ ಅರ್ಜಿಗುಜರಾಯಿಸಿದರು. ಆದರೆ ಈ ರಾಣಿಯ ಸಹಾಯಧನ ಗಂಡು ಹುಡುಗನೊಬ್ಬನ ಪಾಲಾಯಿತು. ಹೆಡ್‌ವಿಗ್‌ಗೆ ಸಿಗಲಿಲ್ಲ. ಅವರಿಗೆ ಉಪಧ್ಯಾಯವೃತ್ತಿ ವಿದ್ಯಾರ್ಥಿದೆಸೆಯಿಂದಲೂ ರೂಡಿಯಿದ್ದರೂ ಹೆಡ್‌ವಿಗ್‌ಗೆ ತಾನು ಉಪಾಧ್ಯಾಯಿನಿಯಾಗಿಯೇ ಉಳಿದುಬಿಡುವುದು ಇಷ್ಟವಿರಲಿಲ್ಲ. ಮುಂದೆ ಓದುವ ತವಕ, ಏನಾದರೂ ಹೊಸದನ್ನು ಸಾಧಿಸುವ ತವಕ. ಆ ಕಾಲದಲ್ಲಿ ಏಷ್ಯನ್ ಮಹಿಳೆಯರು ಪಬ್ಲಿಕ್ ಸರ್ವೀಸ್ ಕಮೀಷನ್‌ನಲ್ಲಿ ಕೆಲಸ ಮಾಡುತ್ತಿರಲಿಲ್ಲ. ಹೆಡ್‌ವಿಗ್ ಈ ಇಲಾಖೆಯ ಆಡಳಿತ ಸೇವಾ ವಿಭಾಗದ ಉದ್ಯೋಗವೊಂದಕ್ಕೆ ಅರ್ಜಿ ಹಾಕಿದರು. ಅವರ ಕೈಯಲ್ಲಿ ಇಂಗ್ಲೀಷ್ ಆನರ್ಸ್ ಫಸ್ಟ್‌ಕ್ಲಾಸ್ ಪದವಿಯಿದ್ದೂ, ಇವರನ್ನು ಸಂದರ್ಶನ ಮಾಡಿದ ಬ್ರಿಟಿಷ್ ಜಡ್ಜ್ ಮತ್ತಿತರು ಈಕೆ ಏಷ್ಯನ್ ಎನ್ನುವ ಕಾರಣಕ್ಕೋ, ದೇಶಪ್ರೇಮಿ ಎನ್ನುವ ಕಾರಣಕ್ಕೋ, ಮಹಿಳೆ ಎನ್ನುವ ಕಾರಣಕ್ಕೋ ಅಥವ ಈ ಮೂರು ಕಾರಣಗಳನ್ನು ಸೇರಿಸಿಯೋ ಈಕೆಗೆ ಎಲ್ಲ ಅರ್ಹತೆಗಳಿದ್ದೂ ಕೆಲಸ ಕೊಡುವುದನ್ನು ನಿರಾಕರಿಸಿ, ಈಕೆಯ ತರಗತಿಯಲ್ಲೇ ಓದುತ್ತಿದ್ದ, ಈಕೆಗಿಂತ ಕಡಿಮೆ ಅಂಕ ಪಡೆದ ಪುರುಷನೊಬ್ಬನಿಗೆ ಈ ಉದ್ಯೋಗವನ್ನು ನೀಡಿದರು. ಈ ಪ್ರಸಂಗ ಹೆಡ್‌ವಿಗ್‌ಗೆ ಬಹಳ ನಿರಾಸೆ, ನೋವು, ಮತ್ತು ಜೊತೆಯಲ್ಲೇ ಇವುಗಳನ್ನೆಲ್ಲಾ ಮೀರಿ ನಿಲ್ಲಬೇಕಾದ ಹಠ ಎಲ್ಲವನ್ನೂ ತಂದುಕೊಟ್ಟಿತು.

ಮೂರು ವರ್ಷ ಮತ್ತೆ ಉಪಾಧ್ಯಾಯಿನಿಯ ವೃತ್ತಿ ನಡೆಸಿದ ಹೆಡ್‌ವಿಗ್ 1955ರಲ್ಲಿ ಲಂಡನ್‌ನಲ್ಲಿ ಗ್ರಂಥಾಲಯ ಶಿಕ್ಷಣ ಪಡೆಯಲು ಸ್ಕಾಲರ್‌ಶಿಪ್ ಪಡೆಯುವುದರಲ್ಲಿ ಸಫಲರಾದರು. ಲಂಡನ್‌ನಲ್ಲಿ ಓದುವಾಗ ನಡೆದ ಘಟನೆಗಳು ಹೆಡ್‌ವಿಗ್‌ರವರ ಬದುಕಿನಲ್ಲಿ ಅನೇಕ ತಿರುವುಗಳನ್ನು ತಂದವು. ಅಲ್ಲಿಯೆ ಸಿಂಗಪುರ ಮತ್ತು ಮಲೇಷಿಯಾದ ವಿದ್ಯಾರ್ಥಿಗಳ ಪರಿಚಯವಾಯಿತು ಮಲೆಯನ್ ಫೋರಂಗೆ ಅತ್ಯಂತ ಚುರುಕು ವಿದ್ಯರ್ಥಿನಿಯಾಗಿದ್ದ ಈಕೆಯನ್ನು ಕಾರ್ಯದರ್ಶಿಯಾಗಿ ಆರಿಸಲಾಯಿತು. ಮುಂದೆ ಈ ಫೋರಂನ ಸದಸ್ಯರು ಲಂಡನ್, ಸಿಂಗಪುರ ಮತ್ತು ಮಲೇಷಿಯಾಗಳಲ್ಲಿ ರಾಜಕೀಯ ಮುಖಂಡರಾಗಿ ಪ್ರಖ್ಯಾತರಾದರು. ಅನ್ವೌರ್‌ನನ್ನು ಭೇಟಿ ಮಾಡಿದ್ದು ಲಂಡನ್‌ನಲ್ಲಿಯೇ. ಆಗ ಆತ ಕಾನೂನು ವಿದ್ಯಾರ್ಥಿಯಾಗಿದ್ದರು. ಆತನಿಗೆ ಅನಾರೋಗ್ಯ ಉಂಟಾಗಿ ಟಿ.ಬಿ. ಸ್ಯಾನಿಟೋರಿಯಂನಲ್ಲಿ ಆತ ಸುಮಾರು ಒಂದು ವರ್ಷದವರೆಗೆ ಉಳಿಯಬೇಕಾಯಿತು. ಅಲ್ಲಿಂದ ಬಂದ ನಂತರ ಹೆಡ್‌ವಿಗ್ ಆತನನ್ನು ಮದುವೆಯಾಗಿ ಅವರ ಆರೋಗ್ಯ ರಕ್ಷಣೆಗೆ ನಿಂತರು. ಈ ಅವಧಿಯಲ್ಲೇ ಹೆಡ್‌ವಿಗ್ ಮಗನ ತಾಯಿಯಾದರು. 1957ರಲ್ಲಿ ಅವರ ಒಪ್ಪಂದದರ ಪ್ರಕಾರ ವಿದ್ಯಾಭ್ಯಾಸ ಮುಗಿಸಿ ಸಿಂಗಪುರದ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಕರ್ತವ್ಯ ಪಾಲನೆಗಾಗಿ ಆಕೆ ವಾಪಸ್ ಬರಲೇಬೇಕಾಗಿತ್ತು. ಇಂಗ್ಲೇಂಡ್‌ನಲ್ಲೇ ಉಳಿಯ ಬಯಸಿದ ಪತಿರಾಯ ಹೆಡ್‌ವಿಗ್ ಜೊತೆಗೂಡಲೇ ಇಲ್ಲ. ನಾಲ್ಕು ವರ್ಷಗಳ ದೀರ್ಘ ವಿರಹದ ನಂತರ ಈ ದಂಪತಿಗಳ ಮಿಲನವಾಯಿತು. ಆದರೆ ಈ ದೀರ್ಘ ಬೇರ್ಪಡೆ ಮನಸ್ಸುಗಳ ಬೆಳವಣಿಗೆಯಲ್ಲಿ ವಿರುದ್ಧ ದಿಕ್ಕುಗಳನ್ನು ಸೃಷ್ಟಿಸಿತ್ತು. ತಮ್ಮ ವಿಚ್ಛೇದನದ ಬಗ್ಗೆ ಹೆಡ್‌ವಿಗ್ ಹೇಳುತ್ತಾ "ನಾಲ್ಕು ವರ್ಷಗಳ ಅಗಲಿಕೆ ಮತ್ತು ಬದುಕಿನ ಹೋರಾಟ ಗಣನೆಗೊಳ್ಳದೇ ಅವು ನನ್ನನ್ನೇ ಬಲಿ ತೆಗೆದುಕೊಂಡವು. ವಿಚ್ಛೇದನ ನನ್ನ ಬದುಕಿನ ಘೋರ ಅನುಭವವಾಯಿತು. ಬಹುಶಃ ನಾನು ಯೋಚನೆ ರೀತಿಯಲ್ಲಿ ತೀರಾ ಆದರ್ಶವಾದಿಯಾಗಿದ್ದೆ. ನಾನು ಭಿನ್ನ ಸಂಸ್ಕೃತಿಯ ಈ ಅಡೆತಡೆಗಳನ್ನು ಅಂತೂ ದಾಟಿಕೊಂಡೆ. ಈ ನೋವಿನ ಅನುಭವದ ನಂತರ ನಾನು ಕಲಿತದ್ದು ಎಂದರೆ ಯಾರೇ ಆಗಲಿ ಮದುವೆ ವಿಷಯದಲ್ಲಿ ಅವಸರ ಮಾಡಿಕೊಳ್ಳಬಾರದು ಎನ್ನುವ ಸತ್ಯವನ್ನು" ಎನ್ನುತ್ತಾರೆ.

ಹೆಡ್‌ವಿಗ್‌ರವರು ವಿಚ್ಛೇದನ ಮಾಡಿಕೊಂಡಾಗ ಅವರ ಕೈಯಲ್ಲಿ ಇಬ್ಬರು ಮಕ್ಕಳಿದ್ದರು. ಮಗ ದೊಡ್ಡವನು, ಮಗಳು ಚಿಕ್ಕವಳು. ಆಕೆಗೆ ತಮ್ಮ ತೌರಿನ ಅಕ್ಕತಂಗಿಯರ ಸ್ನೇಹಿತರ ಒತ್ತಾಸೆ ಇತ್ತು. ಮೇಲಾಗಿ ಕೈಯಲ್ಲಿ ಒಳ್ಳೆಯ ಕೆಲಸವಿತ್ತು. ಹಾಗಾಗಿ ಮದುವೆ ಎಷ್ಟೇ ನೋವು, ನಿರಾಸೆ ತಂದರೂ ಅದೆಲ್ಲದರಿಂದ ಪಾರಾಗುವುದು ಸಾಧ್ಯವಾಯಿತು. ಮುಂದೆ ಅವರ ಉದ್ಯೋಗದ ಜೀವನವೇ ದೃಢಗೊಳ್ಳುತ್ತಾ ಹೋಯಿತು. ಆಕೆ ತನ್ನ ಪ್ರತಿಭೆಯಿಂದ ತನ್ನ ಅತೀವ ಕಳಕಳಿಯಿಂದ, ಕೆಲಸದ ತನ್ಮಯತೆಯಿಂದ ಸಾಕಷ್ಟು ಚುರುಕಾಗಿಯೇ ಮೇಲೇರಿದರು ಸಿಂಗಪುರದ ಎಲ್ಲ ಲೈಬ್ರರಿಗಳ ಡೈರೆಕ್ಟರ್ ಆಗಿ ಹಲವಾರು ವರ್ಷ ಸಮರ್ಥರಾಗಿ ದುಡಿದರು. ಇವತ್ತು ವಿಶ್ವದ ಎಲ್ಲ ಗ್ರಂಥಾಲಯಗಳ ಅಗ್ರ ಪಂಕ್ತಿಯಲ್ಲಿ ನಿಲ್ಲಬಲ್ಲಂಥ

ಗ್ರಂಥಾಲಯಗಳನ್ನು ರೂಪಿಸಿದ ಕೀರ್ತಿ ಶ್ರೀಮತಿ ಹೆಡ್‌ವಿಗ್ ಅನೌರ್‌ಗೆ ಸೇರುತ್ತದೆ.

ಹೆಡ್‌ವಿಗ್ ಆದರ್ಶವಾದಿ ಅಷ್ಟೇ ಅಲ್ಲ ನಿಷ್ಠುರವಾದಿಯೂ ಸಹ. ದಿನಾಂಕ 15-8-1983ರಲ್ಲಿ ಸಿಂಗಪುರದ ಪ್ರಧಾನಿ ಮಿ. ಲೀ ಕ್ವಾಯೂ ತನ್ನ ಮೊದಲ ಭಾಷಣದಲ್ಲಿ ''ಸ್ತ್ರೀಯರ ವಿದ್ಯಾಭ್ಯಾಸದ ಗುರಿಯನ್ನೂ ಉತ್ತಮ ಸಂತಾನೋತ್ಪಾದನೆಯಗಾಗಿ ಎನ್ನುವ ಮಾನವ ಅಭಿವೃದ್ಧಿ ಶಾಸ್ತ್ರದ ಒಂದು ವಾದಕ್ಕೆ ತಳಕುಹಾಕಿ ಹೇಳಿದರು. ಅಲ್ಲದೆ ತಮ್ಮ ಈ ವಾದವನ್ನು ಪುಷ್ಟೀಕರಿಸುತ್ತಾ ಪದವೀಧರೆ ತಾಯಿ ಮಕ್ಕಳನ್ನು ಚೆನ್ನಾಗಿ ಬೆಳೆಸಬಲ್ಲಳು ಎಂಬುದರ ಬಗ್ಗೆ ತಮ್ಮದೇ ಆದ ಅಂಕಿಅಂಶಗಳನ್ನೂ ಒದಗಿಸಿದರು. ಅಲ್ಲದೆ ಪದವೀಧರೆಯಲ್ಲದ ತಾಯಿ ಬೆಳೆಸುವ ಮಕ್ಕಳಲ್ಲಿ ಪ್ರತಿಭೆ ಕುಂಠಿತವಾಗಿರುತ್ತದೆ ಹಾಗೂ ಜನಸಂಖ್ಯೆ ಸತ್ವಹೀನವಾಗಿರುತ್ತದೆ ಎನ್ನುತ್ತಾ ಇಂಥ ಶೇ 80 ಭಾಗ ಸಹಜ ಜನತೆಯ ವಿರುದ್ಧ 20% ಭಾಗ ಮಾತ್ರ ಪ್ರಮಾಣಬದ್ಧವಾದ ಜನತೆಯಾಗಿದೆ'' ಎನ್ನುವ ವಿಷಯ ಮಂಡಿಸಿದರು. ಈ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾ ಹೆಡ್‌ವಿಗ್ ಹೇಳುತ್ತಾರೆ ''ಈ ಭಾಷಣ ನನಗೆ ಆಘಾತವನ್ನು ಉಂಟು ಮಾಡಿತು. ನನ್ನಂಥ ಉದ್ಯೋಗಸ್ಥೆಯರ ಸಮಾಧಾನ ಚಿತ್ತವನ್ನು ಕಲಕುವಂಥಾ ವಿಷಯವಾಗಿತ್ತು. ನಾನು ಸರ್ಕಾರಿ ನೌಕರಳೂ ಆಗಿದ್ದರಿಂದ ಈ ಬಗ್ಗೆ ವಿರೋಧವನ್ನು ನೇರವಾಗಿ ಎಲ್ಲಿಯೂ ಪ್ರಕಟಿಸುವಂತಿರಲಿಲ್ಲ. ಆದರೆ ಅವಕಾಶಕ್ಕಾಗಿ ನಾನು ಕಾಯುತ್ತಿದ್ದೆ. ಅಂತಹ ಅವಕಾಶ ಒಂದೇ ತಿಂಗಳಲ್ಲಿ ನನಗೆ ತಾನಾಗಿಯೇ ದೊರಕಿತು. 11-9-83ರಂದು ವಿಶ್ವವಿದ್ಯಾಲಯದ ಪದವೀಧರ ಮಹಿಳೆಯರಿಗೆ ನಾನು ಹೇಳಿದೆ - ನೀವು ಈ ದಿನ ಪದವಿ ಪಡೆದ ಮಹಿಳೆಯರು; ಬಹಳ ಅದೃಷ್ಟಶಾಲಿಗಳು. ನಿಮಗೆ ವಿಶಾಲವಾದ ಉದ್ಯೋಗವಕಾಶವಷ್ಟೇ ಅಲ್ಲ ವಿಶಾಲವಾದ ಜೀವನ ಶೈಲಿಯೂ ಲಭ್ಯವಾಗಿದೆ. ನೀವು ಆರ್ಥಿಕ ಸ್ವಾತಂತ್ರ್ಯದೊಂದಿಗೆ ಮದುವೆಯಾಗುವೋ ಬಿಡುವುದೋ ಎನ್ನುವುದನ್ನು ನೀವೇ ನಿರ್ಧರಿಸಬಹುದು. ಮದುವೆ, ಉದ್ಯೋಗ ಮತ್ತು ಮಕ್ಕಳು ಇವುಗಳ ಆಯ್ಕೆಯಲ್ಲಿ ನಿಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು ಎನ್ನುವುದನ್ನು ನೀವೇ ಸ್ವಂತವಾಗಿ ನಿರ್ಧರಿಸಬಲ್ಲಿರಿ. ನಿಮ್ಮ ಈ ನಿರ್ಧಾರಗಳು ನಿಮಗಷ್ಟೇ ಅಲ್ಲ ಸಿಂಗಪುರಕ್ಕೂ ಬಲ ತರುತ್ತದೆ.

ಹೆಸರಿಗೆ ಪ್ರಜಾಪ್ರಭುತ್ವ ಸಿಂಗಪುರದಲ್ಲಿದೆಯಾದರೂ ಪ್ರಧಾನಿಯು ಹೆಚ್ಚುಕಡಿಮೆ ಸರ್ವಾಧಿಕಾರಿಯೇ ಆಗಿದ್ದಾರೆ. ನಿರೀಕ್ಷಿಸಿದಂತೆ ಅಷ್ಟು ಮುಖ್ಯವಾದ ಪದವಿದಾನದ ಕಾರ್ಯಕ್ರಮದ ಮುಖ್ಯ ಭಾಷಣಕಾರ್ತಿಯ ಮಾತುಗಳು ಪ್ರಧಾನಿಯ ಚಿಂತನೆಗೆ ವಿರುದ್ಧ ಧ್ವನಿಯನ್ನು ಹೊಂದಿದ್ದರಿಂದ ಇದನ್ನೂ ಯಾವ ಸಮೂಹ ಮಾಧ್ಯಮವೂ ಪ್ರಸಾರ ಮಾಡಲಿಲ್ಲ. ಸಿಂಗಪುರದ ಅತ್ಯಧಿಕ ಪ್ರಸಾರವಿರುವ 'ದಿ ಸ್ಟೇಟ್ ಟೈಂಸ್' ಪತ್ರಿಕೆಯಲ್ಲಿ ಒಂದೇ ಒಂದು ಸಾಲೂ ಪ್ರಕಟವಾಗಲಿಲ್ಲ. ಆದರೆ ಈ ಭಾಷಣ ನಿಜವಾಗಿ ತಲುಪಬೇಕಾದವರನ್ನು ತಲುಪಿತು. ಆ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಹೆಡ್‌ವಿಗ್‌ರಂತೆಯೇ ಸ್ವತಂತ್ರ ವಿಚಾರವಾದಿಯಾದ, ಮಹಿಳೆಯರ ಸಂಕಷ್ಟಗಳಿಗೆ ಸ್ಪಂದಿಸುವ ಶ್ರೀಮತಿ ಜೈಬುನ್ ಸಿರಾಜ್‌ರವರಿಗೆ ಈ ಮಾತುಗಳು ಇಷ್ಟವಾದವು. ಈ ಇಬ್ಬರು ಮಹಿಳೆಯರು ಜೊತೆಗೂಡಿ ಸಂಘಟನೆ ಪ್ರಾರಂಭಿಸಿದರು. ಅದರ ಫಲವೇ ಇಂದಿನ ಅವೇರ್ ಸಂಸ್ಥೆ.

❑

ಮಹಿಳೆಯರನ್ನು ಕಂಡು ಮರುಗಿ, ಅವರಿಗೆ ಸಾಂತ್ವನ ನೀಡಲು ಅಥವಾ ಪ್ರಗತಿಯ ಹಾದಿ ತೋರಲು ಸಂವೇದನಾಶೀಲ ವ್ಯಕ್ತಿಯೊಬ್ಬ ಒಂದು ತಾತ್ವಿಕ ಚಿಂತನೆಯ ಗ್ರಂಥವನ್ನು ರಚಿಸಬಹುದು. ಅದು ನಾಟಕೀಯವಾಗಿ ತೋರಬಹುದೆಂಬುದು ನಿಜ; ಆದರೆ ಗ್ರಂಥದಲ್ಲಿ ಪರಿಪಕ್ವ ಅನುಭವದಿಂದ ಹೊಮ್ಮಿದ ವಿಶ್ಲೇಷಣೆ ಇದ್ದರೆ ಅದು ನಾಟಕೀಯವಾಗಿ ಉಳಿಯುವುದಿಲ್ಲ. ಬದಲಾಗಿ ಅದು ಉತ್ತಮ ಮಾರ್ಗದರ್ಶಿಯಾಗುತ್ತದೆ. ವಿಶೇಷವಾಗಿ ಕಾಳಜಿ ಇಲ್ಲದೆ ಕೇವಲ ಒಂದು ಬೌದ್ಧಿಕ ಶಿಸ್ತನ್ನಾಗಿಯೂ ಸ್ತ್ರೀವಾದವನ್ನು ಬಳಸಬಹುದು. ಆದರೆ ಬದಲಾವಣೆಗಾಗಿ ನಡೆಯುವ ಚಿಂತನೆಯು ಮಾತ್ರ ಹೋರಾಟದ ರೂಪದ ಕ್ರಿಯೆಗೆ ಹಾದಿ ಮಾಡಿಕೊಡುತ್ತದೆ. ಚಳುವಳಿಯಲ್ಲಿ ತೊಡಗುವವರು ಬೇರೆ ಮತ್ತು ಚಳುವಳಿಗೆ ಸಿದ್ಧಾಂತವನ್ನು ರೂಪಿಸುವವರು ಬೇರೆ ಆದಾಗ ಎರಡರಲ್ಲೂ ಅಸಂಪೂರ್ಣತೆ ಮತ್ತು ನ್ಯೂನತೆಗಳಿರಲು ಸಾಧ್ಯ. ಚಿಂತನೆ ಮತ್ತು ಕ್ರಿಯೆಗಳು ಅಂತಹ ಸಂದರ್ಭದಲ್ಲಿ ಪರಸ್ಪರವಾಗಿ ಸೂಕ್ಷ್ಮತೆಯತ್ತ ಮುನ್ನಡೆದು ಅಪೇಕ್ಷಿತ ಫಲವನ್ನು ಕೊಡಲು ಸಮರ್ಥವಾಗುತ್ತದೆ. ಮಹಿಳಾ ಚಳುವಳಿಗೆ ಬೇಕಾದ ಆಯಾಮ ಅಂತಹುದು.

- ಡಾ|| ಜಿ. ರಾಮಕೃಷ್ಣ

ಹೀಗೆರಡು ಪ್ರವಾಸ ಕಥನಗಳು

1. ಯೂರೋ-ದರ್ಶನ
ಲೇ : ಹೇಮಲತಾ ಮಹಿಷಿ
ಪ್ರ : ಮನೋಹರ ಗ್ರಂಥಮಾಲ, ಧಾರವಾಡ
ಬೆಲೆ : 80, ಪುಟ: 176

2. ಒಂದು ಕನಸಿನ ಪಯಣ
ಲೇ : ನೇಮಿಚಂದ್ರ
ಪ್ರ : ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ
ಬೆಲೆ : 120, ಪುಟ : 269

ಕನ್ನಡ ಓದುಗರಿಗೆ ಸಾಕಷ್ಟು ಪರಿಚಿತರಾದ ಹೇಮಲತಾ ಮಹಿಷಿ ಮತ್ತು ನೇಮಿಚಂದ್ರ ಬರೆದ ಪ್ರವಾಸ ಕಥನಗಳಿವು. ಇವರಿಬ್ಬರೂ ಒಟ್ಟಿಗೇ ಕೈಗೊಂಡ ಸಾಹಸಯಾತ್ರೆಯ ಚಿತ್ರಣಗಳಿವು. 'ಪ್ಯಾಕೇಜ್ ಟೂರ'ನ್ನು ಕೈಬಿಟ್ಟು ಬೇಕೆಂದೇ ಅಪ್ಪಿಕೊಂಡ ಅಲೆಮಾರಿ ಯಾತ್ರೆಯ ಅನುಭವಗಳಿವು. 35ದಿನಗಳಲ್ಲಿ ಹಗಲು-ರಾತ್ರಿಯೆನ್ನದೆ ಯೂರೋಪಿನಲ್ಲೆಲ್ಲಾ ಈ ಮಹಿಳೆಯರಿಬ್ಬರೇ ಸುತ್ತಾಡಿ ಅನುಭವಗಳನ್ನು ತಮ್ಮದೇ ರೀತಿಯಲ್ಲಿ ದಕ್ಕಿಸಿಕೊಂಡು ಬಂದ ಸಾಹಸಗಾಥೆಗಳಿವು.

ಹೇಮಲತಾರ 'ಯುರೋ-ದರ್ಶನ', ನೇಮಿಚಂದ್ರರ 'ಕನಸಿನ ಪಯಣ' ಒಂದೇ ಆದರೂ ಅವರಿಬ್ಬರೂ ತಾವು ಕಂಡಿದ್ದನ್ನ, ಗ್ರಹಿಸಿದ್ದನ್ನ, ಅನುಭವಿಸಿದ್ದನ್ನ, ಅಭಿವ್ಯಕ್ತಿಸಿರುವರ ರೀತಿ ಬೇರೆಯೇ ಆಗಿವೆ.

ಅಲೆಮಾರಿ ಯಾತ್ರಿಕರಿಗೆ ಏನೆಲ್ಲಾ ಅಡ್ಡಿ ಆತಂಕಗಳು ಯಾವಾಗ ಬೇಕಾದರೂ ಹೇಗಾದರೂ ಬಂದೆರಗ ಬಹುದೆಂಬುದಕ್ಕೆ ಇವರಿಬ್ಬರ ಯೂರೋಪಿನ ಅನುಭವವೇ ಸಾಕ್ಷಿ. ಇವಕ್ಕೂ ಮೊದಲೇ 'ಸಿದ್ಧ'ರಾಗಿಯೇ ಹೊರಟ ಇವರ ಧೈರ್ಯವನ್ನು ಮೆಚ್ಚಬೇಕಾದ್ದೇ. (ಮುಂದೆ ಇಂಥ ಸಾಹಸವನ್ನು ಕೈಗೊಳ್ಳುವವರಿಗೆ ಈ ಪುಸ್ತಕಗಳು ಮಾದರಿಯಂತಿವೆ. ಈ ಲೇಖಿಕಿಯರಿಗಿದ್ದಂಥ ಭಂಡ ಧೈರ್ಯ ಇರಲೇ ಬೇಕಾಗುತ್ತದೆ-).

ಸಾಹಸ ಯಾತ್ರೆಯ ಆರಂಭದಲ್ಲೇ ತೊಡಕುಂಟಾದರೂ ಧೈರ್ಯಗೆಡದೆ ಕೊನೆಯವರೆಗೂ ಅವರಿಬ್ಬರೂ ಪಟ್ಟಪಾಡನ್ನು, ಅನುಭವದ ಸಂತೋಷವನ್ನು ಸಹಜವಾಗಿಯೇ ಓದುಗರೊಂದಿಗೆ ಹಂಚಿಕೊಂಡಿದ್ದಾರೆ. ಸಾಮಾನ್ಯವಾಗಿ ಪ್ರವಾಸಿಗರೆಲ್ಲರೂ ನೋಡಿಬರುವುದಕ್ಕಿಂತಾ ವಿಶೇಷವಾಗಿ ಯೂರೋಪಿನ ಗಲ್ಲಿಗಲ್ಲಿಗಳಲ್ಲೆಲ್ಲಾ ಹುಚ್ಚಾಗಿ ಅಲೆದು, ಅಲ್ಲಿ ನೆಲ್ಲವನ್ನೂ ತಮ್ಮ ಅನುಭವದಾಳಕ್ಕೆ ದಕ್ಕಿಸಿಕೊಳ್ಳಬೇಕೆನ್ನುವ ಹುಚ್ಚಿನ ಸಾಹಸಯಾತ್ರೆಯ ಚಿತ್ರಣಗಳಿವು.

ಭಾರತೀಯರಿಗೆ ಅಪರಿಚಿತವಲ್ಲದ ಯೂರೋಪನ್ನು ಇತಿಹಾಸದ ವಿದ್ಯಾರ್ಥಿಯಾದ ಹೇಮಲತಾ ತಾವು ಕಂಡದ್ದನ್ನೆಲ್ಲ ಅದರೆಲ್ಲದರ ಹಿನ್ನೆಲೆಯೊಂದಿಗೆ ಚಿತ್ರಿಸಿರುವ ರೀತಿ ಓದುಗರ ಮನಸ್ಸಿನಲ್ಲಿ ಕೆಲಕಾಲ ಉಳಿಯುವಂತಿದೆ.

ಹಾಗೇ ನೇಮಿಚಂದ್ರ ಕೂಡ ತಾವು ವಿಶೇಷವಾಗಿ ಗಮನಿಸುವ ಸ್ತ್ರೀವಾದಿ ಲೇಖಕಿ ಆಫ್ರಿಕಾ ವಿಜ್ಞಾನಿ ರೋಸಲಿಂಡ್, ಖಗೋಳಶಾಸ್ತ್ರಜ್ಞೆ ಕ್ಯಾರೊಲಿನ್ ಹರ್ಷಲ್, ಐನ್‌ಸ್ಟೈನ್ ಪತ್ನಿ, ಮೇರಿ ಕ್ಯೂರಿ.... ಮುಂತಾದವರ ಬಗ್ಗೆ ಹೆಚ್ಚು ಆಸಕ್ತಿವಹಿಸಿ ಮತ್ತು ತಿಳಿಯ ಬಯಸುವ, ಅವರೆಲ್ಲ ಹುಟ್ಟಿದ ನೆಲವನ್ನು ಕಾಣುವ, ಅಲ್ಲೆಲ್ಲಾ ಓಡಾಡುವ ಹುಚ್ಚನ್ನು ಮೈಗೂಡಿಸಿಕೊಂಡು, ಅಲ್ಲೆಲ್ಲಾ ಒಂಟಿಯಾಗಿ ಅಲೆದ ಅನುಭವವನ್ನು ತಮ್ಮದೇ ಆದ ರೀತಿಯಲ್ಲಿ ಚಿತ್ರಿಸಿದ್ದಾರೆ.

ಸಂಕೋಚದಿಂದಲೋ, ಹಿಂಜರಿಕೆಯಿಂದಲೋ ಸದಾ ಜೊತೆಗೊಬ್ಬರನ್ನು ಕಟ್ಟಿಕೊಂಡು ತಿರುಗಾಡುವ ಇಲ್ಲಿನ ಹೆಂಗಳೆಯರಿಗೆ, ಒಂಟಿಯಾಗಿಯೂ ಸುತ್ತಬಹುದೆಂಬ ಧೈರ್ಯವನ್ನು ಈ ಪುಸ್ತಕಗಳು ತುಂಬುತ್ತವೆಂದರೆ ಆಶ್ಚರ್ಯ ಪಡಬೇಕಾಗಿಲ್ಲ.

ನಮ್ಮ ಮನಸ್ಸಿನಲ್ಲುಳಿಯುವ ಕೆಲವೇ ಪ್ರವಾಸ ಕಥನಗಳಲ್ಲಿ ಇವೂ ಕೂಡ ಸೇರುತ್ತವೆನ್ನುವುದರಲ್ಲಿ ಅನುಮಾನವಿಲ್ಲ.

ಗೀತಾ ಡಿ.ಸಿ.

ಅಚಲ ಸಂಪಾದಕ ಬಳಗದ ಶ್ರೀಮತಿ ನೇಮಿಚಂದ್ರ ಮತ್ತು ಶ್ರೀಮತಿ ಹೇಮಲತಾ ಮಹಿಷಿಯರಿಬ್ಬರೂ ಜೊತೆಯಾಗಿ ಎರಡು ವರ್ಷಗಳ ಹಿಂದೆ ನಡೆಸಿದ ಯುರೋಪ್ ಪ್ರವಾಸವನ್ನು ಕುರಿತ ಪ್ರವಾಸ ಕಥನಗಳಿವು. ಈ ಪಯಣಿಗರ ಸಾಹಸ ಗಾಥೆಯೆರಡೂ ಪ್ರತ್ಯೇಕವಾಗಿ ವಿಭಿನ್ನ ಪ್ರಕಾಶಕರ ಮೂಲಕ ಬೆಳಕು ಕಂಡಿವೆ. ಹಾಗೆಯೇ ಓದುಗರಿಗೂ ವಿಭಿನ್ನ ಅನುಭವವನ್ನು ನೀಡುತ್ತವೆ.

ಹೆರಿಗೆಗೆ ಮೊದಲಿನ ಪತ್ತೆ ಮಾಡುವ ತಂತ್ರ

(ನಿರ್ಬಂಧ ಮತ್ತು ದುರ್ಬಳಕೆಯ ತಡೆ) ಕಾಯಿದೆ 1994

ವೈದ್ಯರೇ ಮತ್ತು ತಂತ್ರಜ್ಞರೇ ಗಮನಿಸಿ.

★ ಗರ್ಭದಲ್ಲಿನ ಮಗುವಿನ (ಭ್ರೂಣ) ಲಿಂಗವನ್ನು ನಿರ್ಧರಿಸಲು ಅಲ್ಟ್ರಾಸೊನೋಗ್ರಫಿ, ಅಮ್ನಿಯೊಸೆಂಟಿಸಿಸ್ ಇತ್ಯಾದಿಯಂತಹ ಹೆರಿಗೆಗೆ ಮೊದಲಿನ ಪತ್ತೆಯು ತಂತ್ರಗಳನ್ನು ಬಳಸುವುದು 1ನೇ ಜನವರಿ 1996ರಿಂದ ನ್ಯಾಯಬಾಹಿರವಾಗಿರುತ್ತದೆ.

★ ಗರ್ಭದಲ್ಲಿರುವ ಭ್ರೂಣದ ಲಿಂಗವನ್ನು ಗುರುತಿಸಲು ಯಾರಿಗಾದರೂ ಹೆರಿಗೆಗೆ ಮೊದಲು ಪತ್ತೆಕಾರ್ಯ ನಡೆಸುವುದು ಕೂಡ ನ್ಯಾಯಬಾಹಿರವಾಗಿರುತ್ತದೆ.

★ ಕೆಳಕಂಡ ಯಾವುದೇ ವ್ಯತಿರಿಕ್ತ ಸಂದರ್ಭಗಳಲ್ಲಿ ಮತ್ತು ಅಧಿನಿಯಮದಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಈಡೇರಿಸುವುದಕ್ಕೆ ಒಳಪಟ್ಟು ಅಂತಹ ವ್ಯತಿರಿಕ್ತ ಪರಿಸ್ಥಿತಿಯನ್ನು ಗುರುತಿಸಲು ಮಾತ್ರ ಹೆರಿಗೆಗೆ ಮೊದಲು ಪತ್ತೆ ಹಚ್ಚುವ ತಂತ್ರಗಳನ್ನು ಉಪಯೋಗಿಸಲು ಅವಕಾಶ ಕೊಡಲಾಗುವುದು.

★ ಕ್ರೊಮಾ ಸೋಮಾಲ್ ಅಬಾನಾರ್ಮಲೀಟೀಸ್: ಜೆನಿಟಿಕ್ ಮೆಟಬಾಲಿಕ್ ಡಿಸೀಸಸ್

★ ಸೆಕ್ಸ್‌ಲಿಂಕ್ಡ್ ಜೆನಿಟಿಕ್ ಡಿಸೀಜಸ್ : ಕಾಂಜೆನಿಟಲ್ ಅನಾಮಲೀಸ್

★ ಹಿಮೊಗ್ಲೊಬನೋಪಥೀಸ್

★ ಈ ಅಧಿನಿಯಮದಡಿಯಲ್ಲಿ ರಿಜಿಸ್ಟರ್ ಮಾಡಿಸಿರುವ ಜೆನಿಟಿಕ್ ಕ್ಲಿನಿಕ್‌ಗಳು ಜೆನಿಟಿಕ್ ಲ್ಯಾಬೋರೇಟರಿಗಳು ಮತ್ತು ಜೆನಿಟಿಕ್ ಕೌನ್ಸಿಲಿಂಗ್ ಸೆಂಟರುಗಳಲ್ಲಿ ಮಾತ್ರ ಹೆರಿಗೆಗೆ ಮೊದಲಿನ ಪತ್ತೆಯ ತಂತ್ರಗಳನ್ನು ಬಳಸಬಹುದು ಮತ್ತು ಜೆನೆಟಿಕ್ ಕೌನ್ಸಿಲಿಂಗ್ ಒದಗಿಸಬಹುದು.

★ ದಯವಿಟ್ಟು ಸದರಿ ಅಧಿನಿಯಮ ಮತ್ತು ನಿಯಮಗಳ ಬಗ್ಗೆ ಸ್ವತಃ ಅರಿವು ಮಾಡಿಕೊಳ್ಳಿ ಮತ್ತು ಸರ್ಕಾರ ಅಥವಾ ಖಾಸಗಿ ನಿಮ್ಮ ಸಂಸ್ಥೆಯನ್ನು ನೊಂದಾಯಿಸಿಕೊಳ್ಳಿ.

★ ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಹೆರಿಗೆಗೆ ಮೊದಲು ಪತ್ತೆ ಕಾರ್ಯ ಬಳಸಿಕೊಂಡಲ್ಲಿ ಅದನ್ನು ಅಪರಾಧವೆಂದು ಪರಿಗಣಿಸಿ ಮೊದಲ ಅಪರಾಧಕ್ಕೆ ರೂ. 10,000-00 ದಂಡ ಮತ್ತು 3 ವರ್ಷ ಜೈಲು ಶಿಕ್ಷೆ ವಿಧಿಸಲಾಗುವುದು. ಎರಡನೆಯ ಸಲ ಈ ಕಾನೂನನ್ನು ಉಲ್ಲಂಘಿಸಿದಲ್ಲಿ ರೂ. 50,000-00 ದಂಡ ಮತ್ತು 5 ವರ್ಷ ಜೈಲು ಶಿಕ್ಷೆ ವಿಧಿಸಲಾಗುವುದು. ಕೆಲವೊಂದು ಸೇವಾ ಸೌಲಭ್ಯಕ್ಕೆ ಒಪ್ಪಿಗೆ ನೀಡಿದಂತೆ ಸ್ತ್ರೀ ಅಥವಾ ಅವಳ ಗಂಡ, ಅತ್ತೆ ಮಾವಂದಿರು ಸಹಾಯ ಬಯಸಿ ಬಂದಾಗ ಉಲ್ಲಂಘನೆ ಎಂದು ಪರಿಗಣಿಸಿ ಪತ್ತೆ ಕಾರ್ಯ ಒತ್ತಾಯ ಪಡಿಸಿದಲ್ಲಿ ಅದು ನಿಯಮ ಉಲ್ಲಂಘನೆ ಎಂದು ಪರಿಗಣಿಸಿ ಅಂಥ ಆಡಳಿತ ಮಂಡಲಿಗಳು ಅಥವಾ ಸಿಬ್ಬಂದಿ ವರ್ಗದವರು ಶಿಕ್ಷೆಗೆ ಅರ್ಹರು.

★ ಹೆಚ್ಚಿನ ಮಾಹಿತಿಗಾಗಿ, ಹೆಚ್ಚುವರಿ ನಿರ್ದೇಶಕರು (ಕುಟುಂಬ ಕಲ್ಯಾಣ) ಆರೋಗ್ಯ ಇಲಾಖೆ, ಆನಂದರಾವ್ ವೃತ್ತ ಬೆಂಗಳೂರು - 560 009.

ಕರ್ನಾಟಕ ವಾರ್ತೆ

ಸದಾ ಸುದ್ದಿಯಲ್ಲಿರುವ ಕಮಲಾ ಸುರಯ್ಯಾ

- ನೇಮಿ

ಮದುವೆ, ಮತಾಂತರ ಅತ್ಯಂತ ವೈಯುಕ್ತಿಕ ವಿಷಯಗಳು. ಅವು ವೈಯಕ್ತಿಕವಾಗಿ ಉಳಿದರೇ ಚಂದ. ಅವನ್ನು ಸುದ್ದಿ ಮಾಡಲು, ಪ್ರಚಾರ ಗಿಟ್ಟಿಸಲು ಬಳಸ ಹೊರಟರೆ ಇಲ್ಲದ ಸದ್ದು ಗದ್ದಲಕ್ಕೆ ಕಾರಣವಾಗುತ್ತದೆ.

ದಶಕಗಳ ಹಿಂದೆ ಕಮಲಾದಾಸ್ ತಮ್ಮ 'ಮೈ ಸ್ಟೋರಿ' ಬರೆದು ಸಂಪ್ರದಾಯಸ್ಥರನ್ನು ಬೆಚ್ಚಿ ಬೀಳಿಸಿದ್ದರು. ಓರ್ವ ಭಾರತೀಯ ಹೆಣ್ಣು ವಿವಾಹಪೂರ್ವ, ವಿವಾಹೇತರ ಸಂಬಂಧಗಳ ಬಗ್ಗೆ ಬರೆಯುವುದು ದೊಡ್ಡ ಸುದ್ದಿಯಾಗಿತ್ತು, ಗದ್ದಲವಾಗಿತ್ತು. ಇಂದು ಮಹಿಳಾ ಚಳುವಳಿಗಳ ಸಮಯದಲ್ಲಿ, ಮಹಿಳಾ ಅಧ್ಯಯನ ವಿಶೇಷ ವಿಭಾಗವಾಗಿ ರೂಪುಗೊಂಡಿರುವ ಪರಿಸರದಲ್ಲಿ 'ಮೈ ಸ್ಟೋರಿ' ಸುದ್ದಿಯಾಗದು. ಆದರೆ ಮಹಿಳಾ ಸ್ವಾತಂತ್ರ್ಯ, ಮಹಿಳಾ ಹಕ್ಕುಗಳನ್ನು ಕುರಿತು ಸಾಕಷ್ಟು ಜಾಗೃತಿ ಮೂಡಿರುವ ಈ ಕಾಲದಲ್ಲಿ 'ಬುರ್ಕಾ ಮಹಿಳೆಗೆ ರಕ್ಷಣೆ ಒದಗಿಸುತ್ತದೆ, ಸ್ವಾತಂತ್ರ್ಯಕ್ಕಿಂತ ಬಂಧನವೇ ಹಿತ, ಬೋರು ಹೊಡೆಸುವ ಹೆಂಡತಿಗೆ ತಲಾಕ್ ಕೊಡಲು ಗಂಡಸಿಗೆ ಹಕ್ಕಿರಬೇಕು, ನನ್ನ ಗಂಡಸಿಗೆ ಮತ್ತಷ್ಟು ಹೆಂಡಿರಿದ್ದರೆ ಒಳಿತು' ಎಂದರೆ ಅವು ಬಾರೀ ಸುದ್ದಿಯಾಗುತ್ತದೆ. ಅಂತೂ ಸದಾ ಸುದ್ದಿಯಲ್ಲಿರುತ್ತಾರೆ ಲೇಖಕಿ ಕಮಲಾ ದಾಸ್ ಉರಫ್ ಸುರಯ್ಯಾ.

ಅರವತ್ತೇಳು ವರ್ಷದ ಕಮಲಾದಾಸ್‌ಗೆ ರಾತ್ರೋರಾತ್ರಿ 'ಬುರಕಾದಲ್ಲಿ ರಕ್ಷಣೆ ಇದೆ' ಎನಿಸಿತು. 'ಹಿಂದೂ ದೇವತೆಗಳು ಶಿಕ್ಷಿಸುವ ಕ್ರೂರಿಗಳು, ಅಲ್ಲಾ ಕ್ಷಮಿಸುವ ದಯಾಮಯ' ಎಂದು ಜ್ಞಾನೋದಯವಾಯಿತು. ಸರಿ, ಹಿಂದೂ ಧರ್ಮವನ್ನು ತೊರೆದು ಇಸ್ಲಾಂ ಧರ್ಮಕ್ಕೆ ಮತಾಂತರ ಗೊಂಡರು. ಕಮಲಾದಾಸ್ 'ಸುರಯ್ಯಾ' ಆದರು, ಆದರೆ ಬದಲಾದದ್ದು ಹೆಸರು ಮಾತ್ರ.

ಕಮಲಾದಾಸ್ ಮುಸ್ಲಿಮ್ ಯುವಕರೊಬ್ಬರನ್ನು ವಿವಾಹವಾಗಲು ಬಯಸಿರುವುದು ಗುಟ್ಟಿನ ವಿಷಯವೇನೂ ಅಲ್ಲ. ಕಮಲಾದಾಸ್ ಅವರೇ ತಮ್ಮ ವಿವಾಹದ ಸುದ್ದಿಯನ್ನು ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ ಧಾರಾಳವಾಗಿ ಹೇಳಿಕೊಂಡಿದ್ದಾರೆ. ಆದರೆ ತಮ್ಮ ಮತಾಂತರಕ್ಕೆ ಕಾರಣ 'ವಿವಾಹ'ವೆಂದು ಈಕೆ ಒಪ್ಪಿಕೊಳ್ಳಲು ಸಿದ್ಧವಿಲ್ಲ. ಆದಕ್ಕೆ ಅಖಂಡ ಬೌದ್ಧಿಕ ಕಾರಣವಿದೆ ಎಂದು ನಂಬಲು, ನಂಬಿಸಲು ಪ್ರಯತ್ನಿಸುತ್ತಿದ್ದಾರೆ.

'ಸಾವಿ' ಪತ್ರಿಕೆ ವರದಿ ಮಾಡಿರುವಂತೆ ಕಮಲಾದಾಸ್ ಇಬ್ಬರು ಹೆಂಡಿರಿರುವ 39 ವರ್ಷದ ಲೀಗ್ ಯುವಕ ಎಂ.ಪಿ. ಅಬ್ದುಲ್ ಸಮದ್ ಸಮದಾನಿ ಎಂಬುವರನ್ನು ವಿವಾಹವಾಗಲು ಬಯಸಿದ್ದಾರೆ. ವಿವಾಹಕ್ಕೆ ಅಬ್ದುಲ್ ಅವರು ಹಾಕಿದ ನಿಯಮ ಆಕೆ ಮತಾಂತರಗೊಳ್ಳಬೇಕು ಎಂಬುದು. ಈ ಕಾರಣಕ್ಕೆ ಕಮಲಾದಾಸ್ ಇಸ್ಲಾಂ ಧರ್ಮವನ್ನು ಸ್ವೀಕರಿಸುತ್ತಿದ್ದಾರೆ. ಕಮಲಾದಾಸ್ ಅವರ ಮತಾಂತರದ ಹಿಂದಿನ ಹಿನ್ನೆಲೆ ಇಷ್ಟೇ ಸರಳವಾಗಿ ಕಾಣುತ್ತದೆ. ಆದರೆ ಕಮಲಾ ದಾಸ್ ತನ್ನ ಮತಾಂತರ ತನ್ನ ಮರುಮದುವೆಗೆ ಅನಿವಾರ್ಯವಿತ್ತು ಎಂದು ಸರಳವಾಗಿ ಹೇಳಿ ಮುಗಿಸಲು ಎಲ್ಲಿ ಸಾಧ್ಯ ? 'ಅದು ತನ್ನ ದಶಕ ದಶಕಗಳ ನಿರ್ಧಾರ, ತನ್ನ ಆಯ್ಕೆ' ಎಂದು ವೈಭವೀಕರಿಸುವ ಭರದಲ್ಲಿ, ತಮ್ಮ ಮತಾಂತರಕ್ಕೆ ಮಹತ್ತರದ ಉದ್ದೇಶವನ್ನು ತಗುಲಿಸುವ ಆತುರದಲ್ಲಿ, ಒಂದು ಭಾವುಕ ನಿರ್ಣಯಕ್ಕೆ ಅಖಂಡ ಬೌದ್ಧಿಕ ವಿವರಣೆಗಳನ್ನು, ವಿಶ್ಲೇಷಣೆಗಳನ್ನು ನೀಡ ಹೊರಟರು. ಅವರ ಇಸ್ಲಾಂ ಧರ್ಮದ ಹೊಗಳಾಟವಾಗಲಿ, ಹಿಂದೂ ಧರ್ಮದ ತೆಗಳಾಟವಾಗಲಿ ಯಾವುದೂ ಪ್ರಾಮಾಣಿಕವಾಗಿ ಧ್ವನಿಸುವುದಿಲ್ಲ. ಆಕೆ ಮುಸ್ಲಿಮ್ ಧರ್ಮದ ಹೊಗಳಾಟದಿಂದ ಮುಸ್ಲಿಂ ಬಾಂಧವರು ಬೀಗುತ್ತಾರೆ ಎಂದು ಭಾವಿಸಿದರೆ ಅದೂ ಮೂರ್ಖತನವಾಗುತ್ತದೆ. ಆಕೆಯ ಹೇಳಿಕೆಗಳ ಪಾರದರ್ಶಕ ಸುಳ್ಳುಗಳು ಜನ ಸಾಮಾನ್ಯರಿಗೂ ಅರ್ಥವಾಗುವಷ್ಟು ಸ್ಪಷ್ಟವಾಗಿವೆ. 'ಅಲ್ಲಾನ ಪ್ರೇರಣೆ, ಕರುಣೆ ತನ್ನ ಮೇಲಿದೆ' ಎಂದು ನಂಬಿಸಲು ಅಖಂಡ ಪ್ರಯತ್ನ ಪಡುತ್ತಿದ್ದಾರೆ. 'ಒಂದು ಸಂಜೆ ಕಾರಿನಲ್ಲಿ ಬರುವಾಗ ಬಿಳುಚಿದ ಬೆಣ್ಣೆ ಬಣ್ಣದ ಸೂರ್ಯ ನನಗೆ ಕಂಡ, ಸಂಜೆಯ ಹೊತ್ತು ನನಗೆ ಬೆಳಗಿನ ಸೂರ್ಯ ಕಂಡು, ನನಗೆ ಅಲ್ಲಾನ ಸೂಚನೆ ತಿಳಿಯಿತು' ಎಂದು ಮೊದಲು ಇವರು ಕೊಟ್ಟ ವಿವರಣೆ ಅಷ್ಟೇನೂ ಆಕರ್ಷಕವಾಗಿ ಕಾಣದ ಕಾರಣ, ಇದೀಗ 'ತಾನು ಮತಾಂತರಗೊಂಡ ಮೇಲೆ ತನ್ನ ಕಾಲುನೋವು ಮಾಯವಾಯಿತು' ಎಂದು ನಂಬಿಸಲು ಹೊರಟಿದ್ದಾರೆ.

ತಮ್ಮ ಭಾವೀ ಪತಿಯನ್ನು, ಮುಸ್ಲಿಂ ಬಾಂಧವರನ್ನು ಒಲಿಸಿಕೊಳ್ಳುವ ಆತುರದಲ್ಲಿ, ಅತ್ಯುತ್ಸಾಹದಿಂದ ಇಸ್ಲಾಂ ಧರ್ಮವನ್ನು ಪ್ರಶಂಸಿಸಿ, ಹಿಂದೂ ಧರ್ಮವನ್ನು ತೆಗಳಿ ಕಮಲ ಸುರಯ್ಯಾ, ಹಿಂದೂ-ಮುಸ್ಲಿಂ ಇಬ್ಬರನ್ನೂ ಎದುರು ಹಾಕಿಕೊಂಡಿದ್ದಾರೆ. ಇಷ್ಟೆಲ್ಲ ಪ್ರಕರಣದ ಕೇಂದ್ರಬಿಂದುವಾಗಿರುವ ಅಬ್ದುಲ್ ಅವರು, ಮದುವೆಗೆ ಮೊದಲೇ ಕಮಲಾ ಎಬ್ಬಿಸಿದ ಈ ಸುದ್ದಿಯ ಸುಂಟರಗಾಳಿಯಲ್ಲಿ ತತ್ತರಿಸಿ ಹೋಗಿ, ಸದ್ಯಕ್ಕೆ ವಿವಾಹಕ್ಕೆ ತಡೆ ಹಾಕಿದ್ದಾರೆ.

ಹದಿಮೂರು ವರ್ಷಗಳಿಗೆ ಹಿಂದೆ ಬೆಂಗಳೂರಿನ ಶಾಶ್ವತಿ ಮಹಿಳಾ ಅಧ್ಯಯನ ಕೇಂದ್ರದವರು ಕಮಲಾದಾಸ್‌ರವರಿಗೆ ಶಾಶ್ವತಿ ಪ್ರಶಸ್ತಿ ನೀಡಿ ಗೌರವಿಸಿದಾಗ ಆ ಲೇಖಕಿಯನ್ನು ಸಂದರ್ಶಿಸುವ ಅವಕಾಶ 'ಅಚಲ'ಗೆ ಸಿಕ್ಕಿತು. ಅವರನ್ನು ಸಂದರ್ಶಿಸಲೆಂದು ಇಂಗ್ಲಿಷ್ ಅಧ್ಯಾಪಕ ಸುಂದರ್‌ರಾಜ್‌ರವರೊಂದಿಗೆ ಪತ್ರಿಕೆಯ ಸಂಪಾದಕಿ ಅವರಿದ್ದಲ್ಲಿಗೆ ತೆರಳಿ ಅವರ ಸಾಹಿತ್ಯದ ವಸ್ತುವನ್ನು ಕುರಿತಂತೆ ಕೆಲವು ಪ್ರಶ್ನೆಗಳನ್ನು ಹಾಕಿದಾಗ ಕಮಲಾ ಕೆರಳಿದ ಸಿಂಹಿಣಿಯಾದರು. ಸಿಂಹಳದಲ್ಲಿ ಸಾಯುತ್ತಿರುವ ಭಾರತೀಯ ಸೈನಿಕರ ತಾಯಿಯರ ಪರವಾಗಿ ಕಣ್ಣೀರು ಹರಿಸಿ, ಮಾತೃತ್ವದ ವಿಷಯ ಬಿಟ್ಟು ಬೇರೇನನ್ನೂ ಮಾತನಾಡಲು ಸಿದ್ಧರಿಲ್ಲದ ಕಮಲಾ ನಮ್ಮೊಡನೆ ಮಾತನಾಡಲು ನಿರಾಕರಿಸಿದರು. ಉದ್ರಿಕ್ತರಾಗಿ ನಮ್ಮನ್ನು ನಿಂದಿಸಿ ಹೊರಗಟ್ಟಿದ್ದರು—ಎಂಬುದು ನೆನಪಿಗೆ ಬರುತ್ತದೆ.

— ಸಂ.

ಇಂದಿನ ಸಮಯದಲ್ಲಿ ಮಹಿಳೆಯೊಬ್ಬಳ ಮರುಮದುವೆಯಾಗಲೀ (ಆಕೆ 67 ವರ್ಷದ ಮಹಿಳೆಯಾಗಿದ್ದರೂ) ಮತಾಂತರವಾಗಲಿ ಭಾರೀ ಸುದ್ದಿಯಾಗುತ್ತಿರಲಿಲ್ಲ. ಪತ್ರಿಕೆಗಳು ಒಮ್ಮೆ ವರದಿ ಮಾಡಿ ಮರೆತು ಬಿಡುತ್ತಿದ್ದವು. ಆದರೆ ಕಮಲಾ ದಾಸ್ ಅವರಿಗೆ ಸುದ್ದಿಯಾಗದೆ, ಸದ್ದು ಗದ್ದಲವಿಲ್ಲದೆ ಏನನ್ನು ಮಾಡುವುದು ತಿಳಿದಿದ್ದಂತಿಲ್ಲ. ಇಷ್ಟೆಲ್ಲ ಸುದ್ದಿಯ ಸುಂಟರಗಾಳಿ ಎಬ್ಬಿಸಿ, 'ನನ್ನ ಧರ್ಮಾಂತರ ಇಷ್ಟು ಗದ್ದಲಕ್ಕೆ, ಇಷ್ಟು ಜನರ ಕೋಪಕ್ಕೆ ಏಕೆ ಕಾರಣವಾಗಬೇಕು?' ಎಂದು ಅಚ್ಚರಿಗೊಳ್ಳುತ್ತಿದ್ದಾರೆ ಈ 67 ವರ್ಷಗಳ ಮುಗ್ಧೆ. ಗದ್ದಲ, ಕೋಪಕ್ಕೆ ಕಾರಣವಾಗುತ್ತಿರುವುದು ಅವರ ಮದುವೆಯಾಗಲೀ, ಮತಾಂತರವಾಗಲಿ ಖಂಡಿತಾ ಅಲ್ಲ. ಅವರ ಅಪ್ಪಟ ಅಪ್ರಾಮಾಣಿಕತೆ ಮತ್ತು ಬಿಟ್ಟು ಹೋಗುತ್ತಿರುವ ಧರ್ಮದ ಬಗ್ಗೆ ಅನಗತ್ಯದ ಟೀಕೆಗಳು. ಈಕೆಯ ಹೇಳಿಕೆಗಳು 67 ವರ್ಷ ಉಳಿದ ಧರ್ಮದ ಬಗ್ಗೆ ಈಕೆಗಿರುವ ಅಖಂಡ ಅಜ್ಞಾನವನ್ನು ತೋರಿಸುತ್ತವೆ.

ಅಂದ ಹಾಗೆ, 'ಔಟಲುಕ್' ಪತ್ರಿಕೆಗೆ ಸುರಯ್ಯಾ ನೀಡಿರುವ ಸಂದರ್ಶನದ ಕೆಲವು ತುಣುಕುಗಳನ್ನು ನೋಡೋಣ :

ನಿಮ್ಮನ್ನೀಗ ಏನೆಂದು ಕರೆಯೋಣ ?

ಡಾ. ಕಮಲಾ ಸುರಯ್ಯಾ ಎಂದು ಕರೆಯಿರಿ. ಏನಾದರೂ ಕರೆಯಿರಿ ಆದರೆ ದಯವಿಟ್ಟು ನನ್ನನ್ನು ಆಂಟಿ ಎಂದು ಕರೆಯಬೇಡಿ. ನಾನು ಸ್ಮಾರ್ಟ್ ಆಗಿ ಕಾಣುವ ಹೆಂಗಸು. ನಾನು ಯಾವುದೇ ಸಮಾರಂಭಕ್ಕೆ ಹೋಗಿ ಮಿನುಗಬಲ್ಲೆ. ತಿಂದು ಊದಿಕೊಂಡ ದಪ್ಪನೆಯ ಹೆಂಗಸರು ಬಂದು ನನ್ನನ್ನು 'ಆಂಟಿ' ಎಂದು ಕರೆದರೆ ನನಗೆ ಅಪಮಾನವಾಗುತ್ತದೆ.

ನೀವು ಹಿಂದೆಯೇ ಏಕೆ ಮತಾಂತರಗೊಳ್ಳಲಿಲ್ಲ ?

ನನ್ನ ಪತಿ 'ನಾನಿನ್ನೂ ಬೇರೊಂದು ಧರ್ಮವನ್ನು ಹುಡುಕಿ ಹೋಗುವಷ್ಟು ಪ್ರಬುದ್ಧವಾಗಿಲ್ಲ. ಸ್ವಲ್ಪ ಕಾಲ ಕೃಷ್ಣನೊಡನೆ ಆಡು' ಎಂದರು. (ಈಗಲೂ ಪ್ರಬುದ್ಧರಾಗಿದ್ದಾರಾ ಎಂಬ ಅನುಮಾನ !).

ನೀವು ವಿವಾಹವಾಗುತ್ತಿದ್ದೀರಿ ?

ಹೌದು, ಆತ ಮುಸ್ಲಿಮ್ ಯುವಕ. ತುಂಬಾ ಸುಂದರವಾಗಿದ್ದಾನೆ. ಆತನಿಗೆ ಚಂದದ ನಗು ಇದೆ, ಒಳ್ಳೆಯ ಹಲ್ಲುಗಳಿವೆ. ಒಳ್ಳೆಯ ಕೂದಲಿದೆ. (ಅಷ್ಟೇಯೇ?)

ನೀವು ಸಂಪ್ರದಾಯಗಳನ್ನು ಗೌರವಿಸಿದವರಲ್ಲ. ಇದೀಗ ನಿಯಮಬದ್ಧ ಬದುಕಿಗೆ ಸಿದ್ಧವಿದ್ದೀರಾ ?

ನಾನು ನನ್ನ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟಿದ್ದೇನೆ. ಸ್ವಾತಂತ್ರ್ಯ ನನ್ನನ್ನು ತೀರಾ 'ಷ್ಯಾಬಿ'ಯಾಗಿ ಮಾಡಿತ್ತು. ಇಸ್ಲಾಂ ಕಟ್ಟುನಿಟ್ಟಿನದು. ನಾನು ಅಲ್ಲಾನನ್ನು ನನ್ನ ಒಡೆಯನೆಂದು ಭಾವಿಸುತ್ತೇನೆ. ನಾನಾತನ ಅಡಿಯಾಳು. ನನ್ನ ಒಡೆಯನ ಮುಂದೆ ನಿಂತ 'ಹ್ಯಾರಮ್ ಹುಡುಗಿ'ಯಂತೆ ನನಗನಿಸುತ್ತದೆ. (ಸ್ವಾತಂತ್ರ್ಯದ ಈ ಹೊಸ ನಿರ್ವಚನ ಕೇಳಿರಲಿಲ್ಲ)

ನಿಮ್ಮ ಪತಿಗೆ ತಲಾಕ್ ಹೇಳುವ ಅವಕಾಶವಿದೆ. ನಿಮಗೆ ಆ ಭೀತಿಯ ನೆರಳಲ್ಲಿ ಆರಾಮ ಇರಲು ಸಾಧ್ಯವೆ ?

ತಲಾಕ್ ಬಲು ಒಳ್ಳೆಯದು. ತನಗೆ ಬೋರು ಹೊಡೆಸಿದ ಹೆಂಡತಿಯನ್ನು ಹೊರ ಹಾಕುವ ಸ್ವಾತಂತ್ರ್ಯ ಗಂಡಿಗಿರಬೇಕು. ನಾನಾತನ ತಲಾಕಿನ ಹಕ್ಕನ್ನು ಗೌರವಿಸುತ್ತೇನೆ. (ತಾನು ಬೋರು ಹೊಡೆಸೋಲ್ಲ ಎಂಬ ಅಖಂಡ ಆತ್ಮವಿಶ್ವಾಸವೇ?)

ನಿಮ್ಮ ಪತಿಗೆ ಬೇರೆ ಹೆಂಡಿರಿದ್ದರೆ ನಿಮಗೆ ಅಸಮಾಧಾನ ವಾಗುತ್ತದೆಯೆ ?

ಇಲ್ಲ, ನನಗೆ ನಿರಾಳವಾಗುತ್ತದೆ. ಆತನಿಗೆ ನಾನೊಬ್ಬಳೇ ಹೆಂಡತಿಯಾದರೆ ಪ್ರತಿ ರಾತ್ರಿ ಆತ ನನ್ನಲ್ಲಿಗೆ ಬರುತ್ತಾನೆ. ನನ್ನ ಈ ವಯಸ್ಸಿನಲ್ಲಿ ನನಗೆ ಬಹಳ ಆಯಾಸವಾಗುತ್ತದೆ. (ಮದುವೆಯೇ ಆಗದಿದ್ದರೆ ಕೊಂಚವೂ ಆಯಾಸವಿಲ್ಲ ! ಅಂದ ಹಾಗೆ ಮದುವೆ ಅಂದರೆ ಈ ಕವಿಯ ಅರ್ಥದಲ್ಲಿ ಬರೀ ರಾತ್ರಿ ಸಂಬಂಧ ಮಾತ್ರವೇ?)

ಸುರಯ್ಯಾ, ಕಮಲಾ ದಾಸ್‌ರಂತೆಯೇ ಬರೆಯುತ್ತಾಳೆಯೆ ?

ಇಲ್ಲ, ಹೆಣ್ಣೊಬ್ಬಳು 'ಮೈ ಸ್ಟೋರಿ'ಯಂಥಾ ನಾನ್ಸೆನ್ಸ್ ಬರೆಯಲು ಧರ್ಮ ಬಿಡಬಾರದು. (ಅಂತೂ ತನ್ನ ಬರಹ 'ನಾನ್ಸೆನ್ಸ್' ಎಂದು ಒಪ್ಪಿಕೊಂಡಂತಾಯಿತು. ಅಂದಹಾಗೆ ಹಿಂದೂ ಧರ್ಮ ಮೊದಲೇ 'ಫಾತ್ವಾ' ಹಾಕಬೇಕಿತ್ತು ಎಂದು ಈಕೆಯ ಅಂಬೋಣವೆ?)

ನಿಮಗೆ ನಗ್ನ ಹೆಣ್ಣುಗಳನ್ನು ಬರೆಯುವುದು ಇಷ್ಟ ಹವ್ಯಾಸವಾಗಿತ್ತು, ಈಗ ನಿಮ್ಮ ಕುಂಚವೂ ತನ್ನ ಉದ್ವೇಗವನ್ನು ಕಳೆದುಕೊಳ್ಳುತ್ತದೆಯೆ ?

ನನಗೀಗ ನಗ್ನ ದೇಹವನ್ನು ಬರೆಯಲು ಸಾಧ್ಯವೇ ಇಲ್ಲ. ಇಸ್ಲಾಂ ಧರ್ಮದ ಪ್ರಕಾರ ಅದು 'ಹರಾಮ್'. ಆ ಹಂತ ಮುಗಿಯಿತು. ಬದುಕಿನುದ್ದಕ್ಕೂ ಮಜ ಮಾಡಲು ಸಾಧ್ಯವಿಲ್ಲ, ಹೌದಲ್ಲವೇ ಯಾವುದಾದರೂ ಹಂತದಲ್ಲಿ ಕಿಂಡರ್ ಗಾರ್ಟನ್‌ನಿಂದ ಹೊರ ಬರಬೇಕಲ್ಲ. (ಕಮಲಾ ದಾಸ್ ಕಿಂಡರ್‌ಗಾರ್ಟನ್‌ನಿಂದ ಹೊರಬಂದರೆ ??)

ಇವು ಕಮಲಾ ದಾಸ್ ಉರುಫ್ ಸುರಯ್ಯಾ ಉವಾಚಗಳು!

ಸದಾ ಸುದ್ದಿಯಲ್ಲಿರಬಯಸುವ ಚಟಕ್ಕೆ ಬಲಿಯಾದ ಕಮಲಾ ದಾಸ್ ಅವರ ರೋಚಕ ಹೇಳಿಕೆಗಳನ್ನು ಉಪೇಕ್ಷಿಸಬೇಕೆ ಹೊರತು ಉದ್ರಿಕ್ತರಾಗಿ 'ಮರಣದಂಡನೆ' ಎನ್ನುವುದು ವಿಪರೀತದ ಪ್ರತಿಕ್ರಿಯೆ. ಅನಿಸುವುದಿಷ್ಟೆ ಈ 67 ವರ್ಷದ ಮಹಿಳೆಯ ಅಂತರಾಳದಲ್ಲಿನ್ನೂ ಹದಿನಾರರ ಕಿಶೋರಿ ಅಡಗಿದ್ದಾಳೆ. ಪ್ರೀತಿಯ ದಾಹದ, ಅತೃಪ್ತ ಆತ್ಮದ, ಸದಾ ಸುದ್ದಿಯಾಗುವ ಕಾತುರದ ಕಿಶೋರಿ. 'ನನಗೆ ಸ್ವಾತಂತ್ರ್ಯ ಬೇಡ, ಬಂಧನ ಬೇಕು. ಮಜಾ ಮಾಡಿದ್ದು ಸಾಕು, ಬೆಳೆಯಬೇಕು' ಎನ್ನುವ ಈ ಮಹಿಳೆಯನ್ನು ತನ್ನ ಪಾಡಿಗೆ ತಾನಿರಲು ಬಿಟ್ಟು ಬಿಡೋಣ.

❑

CPMG/KA/BG-8/99

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

To :

Smt/Sri

Book-Post/News Letter